
# ಅಪರಂಜಿ

ತಿಳಿನಗೆಯ ಕಾರಂಜಿ

ಸೆಪ್ಟೆಂಬರ್ - 2015



**ಸಂಪಾದಕ ಮಂಡಳಿ**

ಸಂಪಾದಕರು

ಶ್ರೀ ಎಂ. ಶಿವಕುಮಾರ್

ಉಪ ಸಂಪಾದಕರು

ಶ್ರೀ ಬೇಲೂರು ರಾಮಮೂರ್ತಿ

ಸದಸ್ಯರು

ಶ್ರೀ ಎಚ್.ಎನ್. ಆನಂದ

ಶ್ರೀ ಎಚ್. ಗೋಪಾಲಕೃಷ್ಣ

**ಆಡಳಿತ ಮಂಡಳಿ**

ಮ್ಯಾನೇಜಿಂಗ್ ಟ್ರಸ್ಟಿ

ಶ್ರೀ ಎಂ. ಶಿವಕುಮಾರ್

ಟ್ರಸ್ಟಿಗಳು

ಶ್ರೀ ಬೇಲೂರು ರಾಮಮೂರ್ತಿ

ಶ್ರೀ ವಿ.ಆರ್. ನಾಥ್

ಶ್ರೀ ಎಚ್.ಎನ್. ಆನಂದ

ಶ್ರೀ ಸಿ.ಆರ್. ಸತ್ಯ

ಶ್ರೀ ಕೆ. ರವೀಂದ್ರ ರಾವ್

ಗೌರವ ಸಲಹೆಗಾರರು

ಶ್ರೀ ಆರ್. ಶೇಷಗಿರಿರಾವ್

**ಚಂದಾ ವಿವರ:**

**ಬಿಡಿ ಪ್ರತಿ: ರೂ. 10/-**

**ವಾರ್ಷಿಕ ಚಂದಾ: ರೂ. 100/-**

**ಹತ್ತು ವರ್ಷದ ಚಂದಾ: ರೂ. 750/-**

ಸಂಪರ್ಕ ಸಮಯ:

ಬೆಳಿಗ್ಗೆ 8 ರಿಂದ 10 ಗಂಟೆಯವರೆಗೆ

ಚಂದಾ ಹಣದ ಚೆಕ್/ಡ್ರಾಫ್ಟ್‌ಗಳನ್ನು ಕೊರವಂಜಿ ಅಪರಂಜಿ ಟ್ರಸ್ಟ್ ಹೆಸರಿಗೆ ನಮೂದಿಸಿ ಈ ಕೆಳಕಂಡ ವಿಳಾಸಕ್ಕೆ ಕಳಿಸಿ.

ಮನಿ ಆರ್ಡರ್ ಸ್ವೀಕರಿಸಲಾಗುವುದಿಲ್ಲ



# ಅಪರಂಜಿ

ತಿಳಿನಗೆಯ ಕಾರಂಜಿ

**ಸಂಪುಟ 32**

**ಸಂಚಿಕೆ – 12**

**ಸೆಪ್ಟೆಂಬರ್ – 2015**

## ಈ ಸಂಚಿಕೆಯಲ್ಲಿ .....


| | | |
|---|---|---|
| ಅಪರಂಜಿ ಕಿಡಿ | **ಪ್ರಕಾಶ್** | 2 |
| ನಮ್ಮ ನಿಮ್ಮಲ್ಲಿ | **ಶಿವಕುಮಾರ್** | 3 |
| ಶಿಕ್ಷ–ಕರ ದಿನಾ–ಚರಣೆ | **ಪ್ರಶಾಂತ್** | 6 |
| ಹೋಗಿ ಬನ್ನಿ ಮೇಷ್ಟ್ರೇ! | **ಸಿ.ಆರ್. ಸತ್ಯ** | 9 |
| ಮರೆವಿನ ಪೇಚಿನ.... | **ರುದ್ರಯ್ಯ ವಿ. ಗದಗ** | 13 |
| ಟೋಪಿ | **ಜೆ.ಬಿ. ಕೋಟೆ ಅನಂತ** | 18 |
| ಕೊರವಂಜಿ ಪದಬಂಧ | **ವಿದ್ಯಾ ವಿ. ಹಾಲಭಾವಿ** | 19 |
| ಸುವರ್ಣ ಸಿಂಗಪುರ | **ರೇಖಾ ಹೆಗಡೆ ಬಾಳೇಸರ** | 22 |
| ತುಂತುರು | **ದಂನಾಆ** | 25 |
| ನರಕದಲ್ಲಿ........ | **ಎಚ್.ಜಿ. ಸೋಮಶೇಖರ ರಾವ್** | 26 |
| ಮುಖಪುಣ್ಯ | **ಬೇಲೂರು ರಾಮಮೂರ್ತಿ** | 29 |
| ಸ್ವಚ್ಛೇ ದಿನ್ ಆಯೇ ಹೈ | **ವೈ.ವಿ. ಗುಂಡೂರಾವ್** | 31 |
| ವಾಟ್ರೋಲ್ | **ಶ್ರೀಕಾಂತ ಗುಂಡಪ್ಪ** | 34 |
| ಕರದಿಂಗಳ ಕುಬಸ.... | **ಪ್ರಶಾಂತ ಅಡೂರ** | 38 |


**ಮುಖಪುಟ ವ್ಯಂಗ್ಯಚಿತ್ರ – ಗುಜ್ಜಾರ್**


ಪ್ರಕಾಶಕರು : ಕೊರವಂಜಿ ಅಪರಂಜಿ ಟ್ರಸ್ಟ್, 36, 6ನೇ ಮುಖ್ಯರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560 003. email: koravanji42@hotmail.com

ಸಂಪರ್ಕ ವಿಳಾಸ: **ಶ್ರೀ ಬೇಲೂರು ರಾಮಮೂರ್ತಿ**, ಉಪ ಸಂಪಾದಕರು, ಅಪರಂಜಿ ಮಾಸಪತ್ರಿಕೆ, ನಂ. 96, 'ಸುಕೇಶವ' ಎರಡನೇ ಅಡ್ಡರಸ್ತೆ, 20ನೇ ಮುಖ್ಯರಸ್ತೆ, ಮೊದಲನೇ ಫೇಸ್, ಬಿ.ಟಿ.ಎಂ. ಲೇಔಟ್, ಬೆಂಗಳೂರು – 560 068. ದೂರವಾಣಿ: 080–26688488. email: belururamamurthy@gmail.com

*ಮುದ್ರಣ : ರವಿ ಗ್ರಾಫಿಕ್ಸ್ – ಅಕ್ಷರ ಜೋಡಣೆ : ಒಮೇಗಾ ಲೇಸರ್‌ಟೆಕ್*

## ಅಪರಂಜಿ ಕಿಡಿ

● ಪ್ರಕಾಶ್



ನೂರು ಅಭ್ಯರ್ಥಿಗಳ ಕಾಂಗ್ರೆಸ್ ಪಟ್ಟಿ ಇಂದು – ಪತ್ರಿಕೆ

***● ಕಲಿಯುಗದ ಕೌರವರು !?***

★★★

'ಭಾಸ್ಕರ'ನ ಮೇಲೂ ಕರಾಳ ಛಾಯೆ ಮೂಡಿದೆಯಲ್ಲ ಎಂದು ಅಪರಂಜಿ ಚಕಿತಳಾದಳಂತೆ!!

★★★

ಉತ್ತಮ ಅಭ್ಯರ್ಥಿಗಳ ಆಯ್ಕೆಗೆ ಜನ ಜಾಗೃತಿ – ಶೀರ್ಷಿಕೆ

***● 'ಉತ್ತಮ'ರು ಚುನಾವಣೆಗಳಿಂದ ದೂರ ಇರುತ್ತಾರಲ್ಲ !!***

★★★

ದೂರ-ಶಿಕ್ಷಣ ಕೋರ್ಸ್ ಮಾನ್ಯತೆ ರದ್ದು – ಸುದ್ದಿ

***● ಯಾರೋ ದೂರಿರಬೇಕು !!***

★★★

ನಟನೆಯಲ್ಲಿ ಸುಷ್ಮಾ ನಿಸ್ಸೀಮರು – ಸೋನಿಯಾ ಟೀಕೆ

***● ಪಾಪ, ರಾಜಕಾರಣದಲ್ಲಿ ನಟನೆ ಅತ್ಯಗತ್ಯ ಎಂದು ಸೋನಿಯಾ ಅವರಿಗೆ ಗೊತ್ತಾಗಿಲ್ಲ !!***

★★★

ಗಮನ ಸೆಳೆಯಲು ಗದ್ದಲವೇ ಬೇಕೆ? – ಹೇಳಿಕೆ

***● 'ಸದನದ ಘನತೆ'ಗೆ ಮರ್ಯಾದೆ ಇದ್ದರೆ ಸಾಕು !!***

★★★

'ಕೆಲಸ ಮಾಡದಿದ್ದರೆ ವೇತನವಿಲ್ಲ' – ಸಚಿವರ ಹೇಳಿಕೆ ಎಬ್ಬಿಸಿದ ವಿವಾದ – ಸುದ್ದಿ

***● ಸಚಿವರ ವೇತನ 'ಅನಿಕೇತನ' ಅಲ್ಲವೆ ?!***

★★★

ಧರ್ಮ ರಾಜಕಾರಣದಿಂದ ಉತ್ತಮ ಆಡಳಿತ – ಹೇಳಿಕೆ

***● ?!!***


★★★

## ನಮ್ಮ ನಿಮ್ಮಲ್ಲಿ

"ಬಹಳ ಹಿಂದಿನ ಮಾತು. ಚಳಿಗಾಲದ ಆ ಮುಂಜಾನೆ, ಉದಯರವಿಯ ಎಳೆಯ ಬಿಸಿಲು ಕುರುಕ್ಷೇತ್ರದ ಆ ವಿಶಾಲವಾದ ಮೈದಾನವನ್ನು ಚುಂಬಿಸುತ್ತಿತ್ತು. ಆಗತಾನೆ ಕಾಲಿಡುತ್ತಿದ್ದ ಚಳಿಗಾಲದ ತೀಕ್ಷ್ಣತೆಯನ್ನು ಸುತ್ತಲಿನ ಗಾಳಿಯಲ್ಲಿ ಕಾಣಬಹುದಾಗಿತ್ತು. ಆದರೆ ಆಗಸ ಮಾತ್ರ ಆ ಬೆಳಗ್ಗೆ ಸ್ವಲ್ಪ ಸಂತಸವನ್ನು ಹರಡಲು ಹರಸಾಹಸ ಮಾಡುತ್ತಿತ್ತೇನೋ ಎನ್ನುವಂತೆ ತೆಳುಗೆಂಪು ಬಣ್ಣವನ್ನು ಪೂರ್ವದಿಕ್ಕಿಗೆಲ್ಲಾ ಧಾರಾಳವಾಗಿ ರಾಚಿದ್ದೇ ಅಲ್ಲದೆ, ಅದಕ್ಕೆ ಚಿನ್ನದ ಅಂಚಿನ ಮೆರುಗನ್ನೂ ಮೂಡಿಸಿತ್ತು. ಆಗಸದ ಈ ಬಣ್ಣದ ಓಕುಳಿ ಪಶ್ಚಿಮದತ್ತ ಕರಗುತ್ತಿದ್ದ ರಾತ್ರಿಯ ಗಾಢನೀಲಿಯೊಂದಿಗೆ ಬಹು ಮನೋಹರವಾಗಿ ಬೆರೆತುಕೊಂಡಿತ್ತು. ಎಂತಹ ಕಲ್ಲುಎದೆಯನ್ನಾದರೂ ಕರಗಿಸಬಲ್ಲುದಾಗಿದ್ದ ಸೌಂದರ್ಯ ಅದು. ಆ ಕಲ್ಲೆದೆಯವನಿಗೆ ತಲೆಯೆತ್ತಿ ಆಗಸದತ್ತ ಕಣ್ಣು ಹಾಯಿಸುವಷ್ಟು ವ್ಯವಧಾನವಿದ್ದಿದ್ದರೆ! ವಾಸ್ತವದಲ್ಲಿ, ಆ ಮೈದಾನದಲ್ಲಿ ನೆರೆದಿದ್ದ ಸಾವಿರಾರು ಸೈನಿಕರು – ಹಿರಿಯರು, ಕಿರಿಯರು, ಶೂರರು, ಧೀರರು – ಅವರಾರಿಗೂ ಆಗಸದ ಗೊಡವೆಯೇ ಬೇಕಿರಲಿಲ್ಲ..... ಅವರು ಯುದ್ಧವೊಂದರಲ್ಲಿ ಕಾದಾಡಲು ಸನ್ನದ್ಧರಾಗಿ ನಿಂತಿದ್ದರು."

ಹೀಗೆ ಪ್ರಾರಂಭವಾಗುತ್ತದೆ, ನಮ್ಮ ರೂಪಾ ಪೈ ಬರೆದಿರುವ "ದ ಗೀತಾ ಫಾರ್ ಛಿಲ್ಡ್ರನ್." ನಮ್ಮ ಅಪರಂಜಿ ಬಳಗದ ಬರಹಗಾರ್ತಿ ಸುಜಾತಾ ರಾಜಣ್ಣ ಅವರ ಮಗಳು ರೂಪಾ. ರಾಜಣ್ಣ ಮತ್ತು ಸುಜಾತಾ ದಂಪತಿಗಳೊಂದಿಗಿನ ನನ್ನ ಗೆಳೆತನ ಮೂರೂವರೆ ದಶಕಗಳಿಗೆ ಮೀರಿದ್ದು. ಹಾಗಾಗಿ ರೂಪಾ ಭಗವದ್ಗೀತೆಯ ಮೇಲೆ ಪುಸ್ತಕವೊಂದನ್ನು ಬರೆದಿರುವ ಸಂಗತಿ ತಿಳಿದಾಗ ನನ್ನ ಮೊಟ್ಟಮೊದಲ ಎಮೋಷನ್ ಅಂದರೆ ಗಾಬರಿ. "ಗೀತೆ ಮೋಕ್ಷ ಶಾಸ್ತ್ರ, ಉಪನಿಷತ್ತುಗಳ ಸಾರ ಸಂಗ್ರಹ. ಮಕ್ಕಳಿಗೆ, 'ಈ ದೇಹ ಕೇವಲ ಒಂದು ಉಡುಪಿನಂತೆ. ನಾವು ಉಡುಪನ್ನು ಬದಲಿಸುವಂತೆ ಆತ್ಮನು ದೇಹವನ್ನು ಬದಲಿಸುತ್ತಾನೆ' ಎಂದೆಲ್ಲಾ ಹೇಳಲು ಸಾಧ್ಯವೇ? ಪಾಪ, ಹುಡುಗಿ ಏನು ಪೆಚ್ಚು ಕೆಲಸ ಮಾಡಿಕೊಂಡು ಬಿಡುತ್ತದೋ" ಎಂಬೆಲ್ಲಾ ಭಾವನಾ ತರಂಗಗಳು ಮನದಲ್ಲೆದ್ದವು. "ಏನೇ ಆಗಲಿ, ಪುಸ್ತಕ ತರಿಸಿಕೊಂಡು ಓದೇ ಬಿಡೋಣ. ಸುಮ್ಮ ಸುಮ್ಮನೆ ಕೆಟ್ಟ ಚಿಂತನೆ ಸಲ್ಲ" ಅಂದುಕೊಂಡು ಅಮೆಜಾನ್ ಸಂಪರ್ಕಿಸಿ ಪುಸ್ತಕವನ್ನು ತರಿಸಿಯೇ ಬಿಟ್ಟೆ. ಬುಧವಾರ ಮಧ್ಯಾಹ್ನ ಬಂದ ಪುಸ್ತಕವನ್ನು ಓದಲು ಪ್ರಾರಂಭಿಸಿದ ನಾನು ಅದನ್ನು ಕೆಳಗಿಟ್ಟಿದ್ದು ಗುರುವಾರ ಬೆಳಗ್ಗೆ. ಪುಸ್ತಕ ಓದುವ ಸಂಭ್ರಮದಲ್ಲಿ ಕಾಲ ಸರಿದದ್ದೇ ತಿಳಿಯಲಿಲ್ಲ.

"ದ ಗೀತಾ ಫಾರ್ ಛಿಲ್ಡ್ರನ್" ಪುಸ್ತಕ ಮಕ್ಕಳಿಗೆ ಮಾತ್ರವಲ್ಲ, ಗೀತೆಯ ಪ್ರಥಮ ಪರಿಚಯ ಪಡೆಯಲಿಚ್ಛಿಸುವ ಎಲ್ಲರಿಗೂ ಅದು ಒಂದು ಬಹು ಸೂಕ್ತವಾದ ಪರಿಚಯ ಗ್ರಂಥ. ರೂಪಾಳ ಪುಸ್ತಕವನ್ನು ಓದಿದ ನಂತರ ನನಗಾದ ಸಂತೋಷಕ್ಕೆ ಅನೇಕ ಕಾರಣಗಳಿದ್ದರೂ, "ಭಲೇ ಹುಡುಗಿ, ಪರವಾಗಿಲ್ಲ, ಚೆನ್ನಾಗಿ ಅರ್ಥಮಾಡಿ ಕೊಂಡಿದ್ದೀಯ, ಜಾಣೆ" ಎಂದು ಹೇಳುವಂತಾಗಿದ್ದು ಮುಖ್ಯ ಕಾರಣ. ಈ ಪುಸ್ತಕವನ್ನು ರೀಡರ್ ಫ್ರೆಂಡ್ಲಿಯಾಗಿಸಲು ರೂಪಾ ಅನೇಕ ಸೂತ್ರಗಳನ್ನು ಬಳಸಿರುವುದನ್ನು





ಕಾಣಬಹುದು. ಮೊದಲಿಗೆ ಪುಸ್ತಕದ ಭಾಷಾಶೈಲಿ. ಉದಾಹರಣೆಗೆ: ಕಿಲ್ಲರ್ ಆ್ಯಪ್ ಫಾರ್ ಕಂಟೆಂಟ್‌ಮೆಂಟ್ (ಕರ್ಮಯೋಗ), ಟೂ ವೈಲ್ ವಿಲ್ಲನ್ಸ್ (ರಾಗ, ದ್ವೇಷ), ಕೀಪ್ ಫೇತ್ – ರೆಸ್ಟ್ ವಿಲ್ ಫಾಲೋ * ಎಂದು ಬರೆದು ಪುಟದ ಕೆಳಗಡೆ * ಟರ್ಮ್ಸ್ ಎಂಡ್ ಕಂಡೀಷನ್ಸ್ ಅಪ್ಲೈ ಎಂಬುದನ್ನು ನೋಡಿ ನಗೆ ಉಕ್ಕಿ ಬಂತು.

ಇನ್ನೊಂದು ಸೂತ್ರವೆಂದರೆ ಇಡೀ ಗೀತೆಯನ್ನು ಒಂದು ನಾಟಕೀಯ ದೃಷ್ಟಿಯಿಂದ ನೋಡಿ, ಧೃತರಾಷ್ಟ್ರ, ಸಂಜಯ, ಕೃಷ್ಣ ಮತ್ತು ಅರ್ಜುನ ಇವರೆಲ್ಲರನ್ನು ಪಾತ್ರಧಾರಿಗಳಂತೆ ಮೂಡಿಸಿರುವುದರಿಂದ ಪುಸ್ತಕದ ಸ್ವಾರಸ್ಯ ಹೆಚ್ಚಿದೆ.

ಮತ್ತೊಂದು ವಿಷಯ ಪ್ರತಿಯೊಂದು ಅಧ್ಯಾಯವನ್ನು ಈ ಪುಸ್ತಕದಲ್ಲಿ ಮೂರು ಭಾಗಗಳನ್ನಾಗಿ ಮಾಡಿದೆ. ಮೊದಲ ಭಾಗ ಕೃಷ್ಣಾರ್ಜುನ ಸಂವಾದ. ಇದು ಯಾವುದೇ ಕೊರತೆಯಿಲ್ಲದೆ, ಗೀತೆಯ ಪಾಠಕ್ಕೆ ಸರಿಯಾಗಿ ಹೊಂದಿಕೊಂಡಂತಿದೆ. ಎರಡನೆಯ ಭಾಗ, ''ಲೆಸನ್ಸ್ ಫ್ರಮ್ ಗೀತಾ'' ಇದರಲ್ಲಿ ಈಗಿನ ಪೀಳಿಗೆಗೆ ಅರ್ಥವಾಗುವ ಪರಿಭಾಷೆಯನ್ನು ಬಳಸಿ, ಅವರಿಗೆ ತಿಳಿಯುವ ಉದಾಹರಣೆಗಳನ್ನು ನೀಡಿರುವುದು ಉತ್ತಮ ಸಂವಹನಕ್ಕೆ ಅನುವಾಗುತ್ತದೆ. ಮೂರನೆಯ ಭಾಗದಲ್ಲಿ ಪ್ರತಿಯೊಂದು ಅಧ್ಯಾಯದಿಂದಲೂ ಒಂದು ಶ್ಲೋಕವನ್ನು ಉದ್ಧರಿಸಿ, ಅದರ ಸಂಸ್ಕೃತ ಪಾಠ, ಇಂಗ್ಲೀಷ್ ಅವತರಣಿಕೆ ಹಾಗೂ ಇಂಗ್ಲೀಷ್ ಭಾಷಾಂತರಗಳನ್ನು ಕೊಟ್ಟು, ಮಕ್ಕಳಿಗೆ ಈ ಶ್ಲೋಕಗಳನ್ನು ಜೋರಾಗಿ ಓದಿ ತಮ್ಮ ಪಾಂಡಿತ್ಯವನ್ನು ತಮ್ಮ ತಂದೆತಾಯಿಯರಿಗೆ ತೋರಿಸುವಂತೆ ಕುಮ್ಮಕ್ಕು ಕೊಟ್ಟಿದೆ.

ಗೀತೆಯ ಬಗ್ಗೆ ಉದಾಹರಣೆಗಳನ್ನು ಕೊಡುವಾಗ ರೂಪಾ ಧಾರಾಳವಾಗಿ ಇತರ ಸಾಹಿತ್ಯದ ಉಲ್ಲೇಖಗಳನ್ನು ಬಳಸಿರುವುದು ಓದುವ ಮಕ್ಕಳಿಗೆ ಬಹು ಸರಾಗವಾಗುವಂತಿದೆ. ಉದಾಹರಣೆಗೆ ಪುರುಷೋತ್ತಮ ಯೋಗದಲ್ಲಿ ಬರುವ ಅಶ್ವತ್ಥ ವೃಕ್ಷದ ಉಪಮೆಗೆ ''ಜಾಕ್ ಎಂಡ್ ದ ಬೀನ್ ಸ್ಟಾಕ್'' ಕತೆಯನ್ನು ಜೋಡಿಸಿರುವುದು, ನಿಷ್ಕಾಮ ಕರ್ಮಕ್ಕೆ ಉದಾಹರಣೆಯಾಗಿ ಹಾರ್ಪರ್ ಲೀ ಬರೆದಿರುವ ''ಟು ಕಿಲ್ ಎ ಮಾಕಿಂಗ್ ಬರ್ಡ್'' ಪುಸ್ತಕದ ಪಾತ್ರ ಅಟ್ಟಿಕಸ್‌ನನ್ನು ಉದಾಹರಿಸಿರುವುದು ಮತ್ತು ವಿಶ್ವರೂಪ ದರ್ಶನವನ್ನು ತಿಳಿಸುವ ಯತ್ನದಲ್ಲಿ ಆಟಂ ಬಾಂಬ್ ಸ್ಫೋಟವಾದಾಗ ಖ್ಯಾತ ವಿಜ್ಞಾನಿ ಆಪೆನ್‌ಹೈಮರ್, ಗೀತೆಯ ಶ್ಲೋಕಗಳನ್ನು ಉದ್ಗರಿಸಿದ್ದು ಇವೆಲ್ಲಾ ಬಹು ಸಂದರ್ಭೋಚಿತವಾಗಿ ಮೂಡಿಬಂದಿವೆ. ಸಾಯನ್ ಮುಖರ್ಜಿ ರಚಿಸಿರುವ ಚಿತ್ರಗಳು ನಿಜಕ್ಕೂ ಮನಸೆಳೆಯುವಂತಿವೆ.



ಒಟ್ಟಿನಲ್ಲಿ ಹೇಳುವುದಾದರೆ ಒಂದು ವಿಧದಲ್ಲಿ ಇದು ನನ್ನ ಕಣ್ಣು ತೆರೆಸಿದ ಪುಸ್ತಕ. ಎರಡು ವರ್ಷಗಳ ಕಾಲ ಗೀತೆಯನ್ನು ಅಭ್ಯಸಿಸಿ, ಅದರ ಮಾಧುರ್ಯವನ್ನು ಸವಿದು, ''ಗೀತೆ ಅರ್ಥವಾಗಬೇಕಾದರೆ ಜೀವನದಲ್ಲಿನ ಏಳುಬೀಳುಗಳನ್ನು ಅನುಭವಿಸಿ ಭ್ರಮನಿರಸನವಾದ ನಂತರವೇ ಸಾಧ್ಯ'' ಎಂದು ಖಚಿತವಾಗಿ ನಂಬಿದ್ದ ನನಗೆ, ಯುವಕ ಯುವತಿಯರು ಹೀಗೆ ಸಂಭ್ರಮದಿಂದ ಗೀತಾಭ್ಯಾಸ ಮಾಡಬಹುದೆಂದು ತೋರಿಸಿಕೊಟ್ಟ ರೂಪಾಗೆ ನಾನು ಆಭಾರಿ. ಹೇಗೂ ಬಿಎಂಶ್ರೀ ಹೇಳಿದಂತೆ, ''ಮನುಜನಿಗೆ ಮಗು ತಂದೆ'' ಅಲ್ಲವೇ.

**ಶಿವಕುಮಾರ್**

## ಶ್ರೀಯುತ ಕಲಾಂ ರವರೊಂದಿಗೆ ಅಪರಂಜಿ ಸಂಪಾದಕರು



ಅಪರಂಜಿ ಸಂಪಾದಕರಾದ ಶಿವಕುಮಾರ್ ಅವರು ಅಗಸ್ತ್ಯ ಕ್ಯಾಂಪಸ್‌ನಲ್ಲಿ ತಾವು ನಿರ್ಮಿಸಿದ ಖಗೋಳಾಲಯವನ್ನು ಶ್ರೀಯುತ ಅಬ್ದುಲ್ ಕಲಾಂ ಅವರಿಗೆ ವಿವರಿಸುತ್ತಿರುವುದು ಬಲ ತುದಿಯಲ್ಲಿರುವವರು ಅಗಸ್ತ್ಯ ಸಂಸ್ಥಾಪಕ ಶ್ರೀ ರಾಮ್‌ಜಿ ರಾಘವನ್

# ಶಿಕ್ಷ-ಕರ ದಿನಾ-ಚರಣೆ

**- ಪ್ರಶಾಂತ್**

ಪ್ರತಿ ವರ್ಷ ಸೆಪ್ಟೆಂಬರ್ ತಿಂಗಳು ಬಂದಿತೆಂದರೆ ನನಗೆ ನನ್ನ ಬಾಲ್ಯದ ಗಂಡು ಮೆಟ್ಟಿದ ನಾಡು ಚಿತ್ರದುರ್ಗದ ಹೈಸ್ಕೂಲ್ ನೆನಪಿಗೆ ಬರುತ್ತದೆ. ಹೈಸ್ಕೂಲ್‌ನ ಮೆಟ್ಟಲು ಹತ್ತಿದಾಗ ಒಂದು ವಿಚಿತ್ರ ಮನೋಭಾವ. ತರಲೆ ಮಾಡುವ ಥ್ರಿಲ್! ನಮ್ಮ ಕಾಲದಲ್ಲಿ ಹೈಸ್ಕೂಲ್‌ನಲ್ಲಿ ಮೇಷ್ಟ್ರುಗಳಿಗೆ ನಾಮಕರಣ ಮಾಡುವುದು ಸಾಮಾನ್ಯ ಸಂಪ್ರದಾಯ. ಇದನ್ನು ನಾವುಗಳು ಒಂದು ಕರ್ತವ್ಯದಂತೆ ನಡೆಸಿಕೊಂಡು ಬಂದಿದ್ದೆವು. ಸೀನಿಯರ್ಸ್ ಇಟ್ಟ ಹೆಸರುಗಳನ್ನು ನಾವು ಮುಂದುವರಿಸಿಕೊಂಡು ಹೋಗುವುದು ನಮ್ಮ ಧರ್ಮವಾಗಿತ್ತು. ಈ ನಿಟ್ಟಿನಲ್ಲಿ, ತರಲೆ ಹುಡುಗರ ನಿಷ್ಠೆಯಂತೂ ಯುದ್ಧಕ್ಕೆ ಹೋಗುವ ಸೈನಿಕರಿಗಿಂತ ಹೆಚ್ಚಾಗಿತ್ತೆಂದು ಹೇಳಿದರೆ ಉತ್ಪ್ರೇಕ್ಷೆಯೇನಲ್ಲ.

ಶಿಕ್ಷಕರ ದಿನಾಚರಣೆ ಎಂದರೇನು? ಇದನ್ನೇಕೆ ಮತ್ತೆ ಮತ್ತೆ ಆಚರಿಸಬೇಕು? ಎಂಬ ನನ್ನ ಪ್ರಶ್ನೆಗೆ ಸರಿಯಾದ ಉತ್ತರ ಸಿಕ್ಕಿರಲಿಲ್ಲ. (ಈಗಿನಂತೆ ಆಗ ಗೂಗಲ್ ಮಾಡುವ ಹಾಗೂ ಇರಲಿಲ್ಲ!) ಇದಕ್ಕೆ ನಾನೇ ಸರಿಯಾದ ಉತ್ತರ ಕಂಡುಹಿಡಿದು ದೊಡ್ಡ ವಿಜ್ಞಾನಿಯಾಗಿ ಸ್ಕೂಲಿನಲ್ಲಿ ಮೆರೆಯಬೇಕು ಎಂದು ಒಮ್ಮೆ ನಿರ್ಧರಿಸಿದೆ. ನನ್ನ ತಲೆಯಲ್ಲಿ ಲ್ಯಾಬ್ ಸಿದ್ಧವಾಯಿತು. ಪ್ರಯೋಗಮಾಡಲು ಮಾಸ್ತರುಗಳಂತೂ ಹೇರಳವಾಗಿದ್ದರು.

ನನ್ನ ಪ್ರಯೋಗದ ಮೊದಲ ಯಜ್ಞಪಶು ಎಂದರೆ ಎಚ್. ರಾಮಪ್ಪ (ಅಲಿಯಾಸ್ ಹುಚ್ಚ ರಾಮಪ್ಪ). ಮೊದಲಿಗೆ ಅವರ ಚಲನವಲನಗಳನ್ನ ಸೂಕ್ಷ್ಮವಾಗಿ ಗಮನಿಸಲಾರಂಭಿಸಿದೆ. ಅವರು ಸ್ಕೂಲಿಗೆ ಕೈಯ್ಯಲ್ಲಿ ಒಂದು ನಾಗರಬೆತ್ತ ಹಿಡಿದುಕೊಂಡು ಬರುತ್ತಿದ್ದರು. ಅವರು ತರಗತಿಗೆ ಬಂದಕೂಡಲೇ ಅಟೆಂಡೆನ್ಸ್ ಹಾಕುತ್ತಿದ್ದರು. ಹಾಕುವಾಗ ಹುಡುಗರನ್ನು ಸೂಕ್ಷ್ಮವಾಗಿ ಗಮನಿಸುತ್ತಿದ್ದುದನ್ನು ನನ್ನ ನೋಟ್‌ಬುಕ್‌ನಲ್ಲಿ ಬರೆದುಕೊಂಡೆ. ನನ್ನ ಪ್ರಯೋಗಕ್ಕೆ ಇದೊಂದು ಮುಖ್ಯ ಪಾಯಿಂಟ್! ಅಟೆಂಡೆನ್ಸ್ ಹಾಕಿದಮೇಲೆ ಎಂಟು ಜನ ತರಲೆ ಮಾಡುವ ಹುಡುಗರ ಹೆಸರು ಹೇಳಿ ಎಬ್ಬಿಸಿದರು. ತರಗತಿಯ ಎಲ್ಲಾ ಹುಡುಗರಿಗೆ ಇದೊಂದು ಶಾಕ್. ಮೇಷ್ಟರ ಎಕ್ಸ್‌ಪೀರಿಯನ್ಸನ್ನು ಅಂಡರ್ ಎಸ್ಟಿಮೇಟ್ ಮಾಡಬಾರದಾಗಿತ್ತು ಎಂದುಕೊಂಡರು. ಮಾಡಿಯಾಗಿತ್ತು. ಅಟೆಂಡೆನ್ಸ್ ಹಾಕುವಾಗ ನಾವು ಪಿಸುಗುಟ್ಟುವ ಶಬ್ದವನ್ನು ಇವರು ಹೇಗೆ ಕೇಳಿಸಿಕೊಂಡರು ಎಂಬುದೇ ಅವರ ಮುಂದಿದ್ದ ಜ್ವಲಂತ ಪ್ರಶ್ನೆ! ಮೇಷ್ಟ್ರ ಸೂಕ್ಷ್ಮದೃಷ್ಟಿಯನ್ನು ಪಾಪ ಅವರು ಗಮನಿಸಿರಲಿಲ್ಲ. ಈ ಎಂಟು ಹುಡುಗರನ್ನು ಮೇಷ್ಟ್ರು ಎಬ್ಬಿಸಿ, ಎರಡೂ ಕೈಗಳನ್ನು ಮುಂದೆ ಚಾಚಲು ಹೇಳಿದರು. ಅನಂತರ ದೇವರ ಪೂಜೆ ಮಾಡುವಂತೆ ಶ್ರದ್ಧೆಯಿಂದ ಕೈಗಳಿಗೆ ಪೂಜೆ ನಡೆಸಿದರು!

ಅಂದಿನಿಂದ ಈ ಎಂಟು ಹುಡುಗರನ್ನು "ಮಾಮೂಲಿ ಮಂಡಳಿ" ಅಂತ ನಾಮಕರಣ ಮಾಡಿ ಮೇಷ್ಟ್ರು ತಮ್ಮ ಕೆಲಸ ಸುಲಭ ಮಾಡಿಕೊಂಡರು. ಪ್ರತಿದಿನ ಕ್ಲಾಸಿಗೆ

ಬಂದಕೂಡಲೇ ''ಮಾಮೂಲಿಯವರೆಲ್ಲಾ ಏಳ್ರಲೇ ಮೇಲೆ'' ಎನ್ನುವುದು, ನಾಗರಬೆತ್ತದಿಂದ ಪೂಜೆ ಮಾಡುವುದು. ಈ ಸಂಪ್ರದಾಯವನ್ನು ಮುಂದುವರಿಸುವುದು ಅವರ ಉದ್ದೇಶ! ಈಗ ಇಡೀ ಕ್ಲಾಸು ಕಂಟ್ರೋಲಿಗೆ ಬಂತು. ಇದು ರಾಮಪ್ಪ ಮಾಸ್ತರರ ಕ್ಲಾಸ್ ಕಂಟ್ರೋಲ್ ತಂತ್ರಗಾರಿಕೆ! ಇದಾದ ಮೇಲೆ ಗಲಾಟೆ ಮಾಡುವ ಹುಡುಗರಿಗೆ ಮಾಸ್ತರದು ಒಂದೇ ಪ್ರಶ್ನೆ. ''ಏನಲೇ, ನಾಳೆಯಿಂದ ಮಾಮೂಲಿ ಮಾಡ್ಕೊಳ್ಳಲೇನು ನಿನ್ನ?'' ಹುಡುಗರದು ಒಂದೇ ಉತ್ತರ. ''ಬೇಡ ಸಾರ್, ಇವತ್ತು ಬೇಕಾದ್ರೆ ಒಂದು ಏಟು ಹಾಕಿ, ಮಾಮೂಲಿ ಮಾತ್ರ ಬೇಡ'' (ವ್ಹಾಟ್ ಎ ಗ್ರೇಟ್ ಸ್ಟ್ರಾಟೆಜಿ!).

ನನ್ನ ಮುಂದಿನ ಆಯ್ಕೆ ಎಂ.ಜಿ. ಗೋಪಾಲಕೃಷ್ಣ ಮಾಸ್ತರು (ಅಲಿಯಾಸ್ ಬೂಥ). ಆರಡಿ ಎತ್ತರ, ಭಾರಿ ತೂಕ. ನೋಡಿದ್ರೆ ಇವರು ಮೊದಲು ಕಲ್ಲಿದ್ದಲು ಗಣಿಯಲ್ಲಿ ಕೆಲಸಮಾಡುತ್ತಿದ್ದರೋ ಎಂದು ಅನುಮಾನ ಪಡುವ ಹಾಗಿದ್ದರು. ಕರ್ಕಶ ಗಂಟಲು. ಹಳದಿ ಮಿಶ್ರಿತ ಕೆಂಪು ಕಣ್ಣುಗಳು. ಒಟ್ಟಿನಲ್ಲಿ ಅಲಿಯಾಸ್ ಹೆಸರು ಇವರಿಗೆ ಅನ್ವರ್ಥವಾಗಿತ್ತು.

ಇವರು ತರಗತಿಗೆ ಬರುವಾಗ ಕೈನಲ್ಲಿ ಒಂದು ನ್ಯೂಸ್ ಪೇಪರ್ ಹಿಡಿದುಕೊಂಡು ಬರುತ್ತಿದ್ದರು. ಅಟೆಂಡೆನ್ಸ್ ಹಾಕಿದ ಮೇಲೆ ಐದು ನಿಮಿಷ ಪೇಪರ್ ಓದುವುದು ಇವರ ದಿನಚರಿ. ಮುಂದಿನ ಬೆಂಚಿನಲ್ಲಿ ಕುಳಿತಿದ್ದರಿಂದ ನನಗೆ ಅವರನ್ನು ಹತ್ತಿರದಿಂದ ನೋಡುವ ಭಾಗ್ಯ (??) ದೊರೆತಿತ್ತು. ಎಂದಿನಂತೆ ನನ್ನ ಸೈಂಟಿಫಿಕ್ ಮೈಂಡ್ ಕೆಲಸ ಶುರು ಮಾಡಿತ್ತು. ಹತ್ತಿರದಿಂದ ನ್ಯೂಸ್ ಪೇಪರ್ ನೋಡಿದೆ. ಹಳೇ ಡೇಟ್! ಯಾವುದೋ ಹಳೇ ಪೇಪರ್. ಪೇಪರಿನ ಮಧ್ಯೆ ಒಂದು ಸಣ್ಣ ತೂತು. (ಪಾಯಿಂಟ್‌ನ ನೋಟ್‌ಬುಕ್‌ನಲ್ಲಿ ಬರೆದುಕೊಂಡೆ). ಐದು ನಿಮಿಷದ ನಂತರ ಅದೇ ಎಂಟು ಗಲಾಟೆ ಮಾಡುವ ಹುಡುಗರನ್ನು ಎಬ್ಬಿಸಿ ಸ್ಟಾಫ್ ರೂಮಿಗೆ ಕಗಿದರು. ಕೆಲವೇ ನಿಮಿಷಗಳಲ್ಲಿ ಕ್ಲಾಸು ಕಂಟ್ರೋಲಿಗೆ ಬಂದಿತ್ತು. ನನಗೇನೂ ಅರ್ಥವಾಗಲಿಲ್ಲ. ನನ್ನ ಸೈಂಟಿಫಿಕ್ ಮೈಂಡ್ ಕೈ ಕೊಟ್ಟಿತ್ತು. ಏನಾದರೂ ಮಾಡಿ ಇದರ ಮರ್ಮ ಕಂಡುಹಿಡಿಯಲೇಬೇಕು ಎಂದು ತೀರ್ಮಾನಿಸಿದೆ. ಇದರ ಗುಟ್ಟು ಕ್ಲಾಸ್ ರೂಮಿನಲ್ಲಿ ಸಿಗದು ಎಂದು ಒಳಮನಸ್ಸು ಹೇಳುತ್ತಿತ್ತು.

ಮಾರನೆಯ ದಿನ ನಾನು ಎಂದಿನಂತೆ ಬೆಳಗ್ಗೆ ಬೇಗ ಎದ್ದು ಸಾಯಿಮಂದಿರಕ್ಕೆ ಹೂವು ಕೊಡಲು ಹೋಗುತ್ತಾ ಇದ್ದೆ. ದಾರಿಯಲ್ಲಿ ಬೂಥ ಮಾಸ್ತರು ಸೈಕಲ್ಲಿಗೆ ಹಾಲಿನ ಕ್ಯಾನ್ ಹಾಕಿಕೊಂಡು ಹೋಗುತ್ತಿರುವುದನ್ನು ನೋಡಿದೆ. ಮಾಸ್ತರನ್ನು ಫಾಲೋ ಮಾಡಿದೆ. ಮಾಸ್ತರು ಸೀದಾ ಹೋಗಿ ವಾಸುವಿನ ಹೋಟೆಲ್‌ಗೆ ಹಾಲು ಹಾಕಿದರು. ನನ್ನ ಸೈಂಟಿಫಿಕ್ ಮೈಂಡ್ ಕೆಲಸ ಶುರು ಮಾಡಿತು. ಮಾಸ್ತರನ್ನು ಬಿಟ್ಟು ಅವರ ಮನೆ ಕಡೆ ಓಡಿದೆ. ಮನೆ ಹತ್ತಿರ ಬಂದಾಗ ಎಂಟು ಜನ ನಮ್ಮ ಕ್ಲಾಸ್ ಹುಡುಗರು ಮನೆ ಪಾಠಕ್ಕೆ ಕಾಯುತ್ತಿದ್ದರು. ವಾಸು ಅವರ ಗ್ಯಾಂಗ್ ಲೀಡರ್! ವಾಸು ಹೇಳುತ್ತಿದ್ದದ್ದು ಬಹು ಸ್ಪಷ್ಟವಾಗಿ ಕೇಳುತ್ತಿತ್ತು.

''ನಾನು ಹೋದ ವರ್ಷ ತಪ್ಪು ಮಾಡಿದೆ. ಮಾಸ್ತರ ಮಾತು ಕೇಳಿ ನಮ್ಮ ಹೋಟೆಲ್‌ಗೆ ಹಾಲು ಹಾಕಿಸಿಕೊಂಡು ಮನೆ ಪಾಠಕ್ಕೆ ಹೋಗಿದ್ದರೆ ಒಂದು ವರ್ಷ ವೇಸ್ಟ್ ಆಗುತ್ತಾ ಇರಲಿಲ್ಲ! ನೀವುಗಳು ನನ್ನ ಹಾಗೆ ಹಾಳಾಗಬೇಡಿ'' ಎಂದು ಸಲಹೆ ನೀಡುತ್ತಿದ್ದ. ಒಂದೇ ಕ್ಷಣದಲ್ಲಿ ಎಲ್ಲಾ ತಿಳಿದುಹೋಯಿತು! ಸ್ಟಾಫ್ ರೂಮಿನಲ್ಲಿ ಏನು ನಡೆದಿರಬಹುದು ಎಂಬುದನ್ನು ಊಹಿಸಲು ಸೈಂಟಿಫಿಕ್ ಮೈಂಡ್‌ಗೆ ಕಷ್ಟವಾಗಲಿಲ್ಲ. ಗೋಪಾಲಕೃಷ್ಣ ಮಾಸ್ತರ ತಂತ್ರಗಾರಿಕೆ ತಿಳಿದುಹೋಯಿತು. (ವ್ವಾಟ್ ಎ ಸ್ಟ್ರಾಟೆಜಿ!)

ಮನೆಗೆ ಬಂದೆ. ಶಿಕ್ಷಕರ ದಿನಾಚರಣೆಯನ್ನು ಪಾತಂಜಲಿ ಯೋಗಸೂತ್ರವನ್ನು ಬಿಡಿಸುವಂತೆ ಒಂದೊಂದೇ ಶಬ್ದವನ್ನು ಬಿಡಿಸಿದೆ. ಶಿಕ್ಷ-ಕರ ದಿನಾ-ಚರಣೆ. ಕರ ಅಂದರೆ ಕೈ ಅದಕ್ಕೆ ಶಿಕ್ಷೆ ಕೊಡುವವರು ಶಿಕ್ಷಕರು. (ಹುಚ್ ರಾಮಪ್ಪ ಮಾಸ್ತರು). ದಿನಾ-ಚರಣೆ ಅಂದರೆ ದಿನಾ ಆಚರಣೆ ಮಾಡುವವರು. ಅಂದ್ರೆ ದಿನಾ ಹಾಲು ಹಾಕುವವರು ಮತ್ತು ಮನೆ ಪಾಠ ಹೇಳುವವರು (ಬೂಥ ಮಾಸ್ತರು). ನನ್ನ ಕೆಲಸ ಸುಲಭವಾಯಿತು. ಉಳಿದ ಎಲ್ಲಾ ಮಾಸ್ತರಗಳ ತಂತ್ರಗಾರಿಕೆಗಳನ್ನು ಅವರ ಕಾರ್ಯ ವೈಖರಿಗೆ ತಾಳೆ ಹಾಕಿ ನೋಡಿದಾಗ ಶೇಕಡ ನೂರು ಅಂಶ ಮ್ಯಾಚ್ ಆಗುತ್ತಿತ್ತು. ಎಲ್ಲರೂ ಶಿಕ್ಷೆ ಕೊಡುವವರೇ. ಅದೂ ಪ್ರತಿ ದಿನ. ನನ್ನ ಪ್ರಯೋಗ ಮುಗಿದಿತ್ತು. ಶಿಕ್ಷಕರ ದಿನಾಚರಣೆ ಎಂದರೇನು ಮತ್ತು ಯಾಕೆ ಆಚರಿಸಲಾಗುತ್ತೆ ಎಂಬುದನ್ನು ತಿಳಿದು ಮನಸ್ಸು ಹಗುರವಾಯಿತು. ಇದನ್ನು ನಿಮಗೂ ತಿಳಿಸುತ್ತಿದ್ದೇನೆ. ಹ್ಯಾಪಿ ಟೀಚರ್ಸ್ ಡೇ!

✷

---

**ನಿವೃತ್ತಿಯಾದವನು**

ಪ್ರಶ್ನೆ: ವಾರದಲ್ಲಿ ಎಷ್ಟು ದಿನಗಳಿವೆ?
ನಿವೃತ್ತಿಯಾದವ: 6 ಶನಿವಾರಗಳು, ಒಂದು ಭಾನುವಾರ.
ನಿವೃತ್ತಿಯಾದವನು ಮಲಗುವುದು ಯಾವಾಗ?
ಸೋಫಾದ ಮೇಲೆ ತೂಕಡಿಸಿದ 2 ತಾಸುಗಳ ನಂತರ
ನಿವೃತ್ತಿಯಾದವರ ಮಾಮೂಲು ಗೊಣಗಾಟ ಏನು?
ಎಲ್ಲ ಕೆಲಸ ಮಾಡಲು ಸಾಕಷ್ಟು ಸಮಯ ಇಲ್ಲ ಎಂಬುದು.
ನಿವೃತ್ತಿಯಾದವವರನ್ನು ಸೀನಿಯರ್ಸ್ ಎಂದು ಕರೆದರೆ ಆಕ್ಷೇಪಿಸರು ಯಾಕೆ?
ಏಕೆಂದರೆ 10% ರಿಯಾಯತಿ ಸಿಗುವುದರಿಂದ.
ನಿವೃತ್ತಿಯಾದವರು ಪೈಸಾಗಳನ್ನೇಕೆ ಎಣಿಸುತ್ತಾರೆ?
ಅವರಿಗೆ ಮಾತ್ರ ಸಮಯ ಇರುವುದರಿಂದ.
ನಿವೃತ್ತಿಯಾದವರು ಮರಳಿ ಶಾಲೆಗೆ ಹೋದರೆ ಏನು ಅನುಕೂಲ?
ಚಕ್ಕರ್ ಹೊಡೆದಾಗ ಅಪ್ಪನನ್ನು ಕರೆದುಕೊಂಡು ಬಾ ಎಂದು ಮೇಷ್ಟ್ರು ಹೇಳರು.
ನಿವೃತ್ತಿಯಾದವರು ವಾರಪೂರ್ತಿ ಏನು ಮಾಡುತ್ತಾರೆ?
ಸೋಮವಾರದಿಂದ ಶುಕ್ರವಾರದವರೆಗೆ ಏನೂ ಇಲ್ಲ. ಶನಿವಾರ/ಭಾನುವಾರ ರೆಸ್ಟ್.

*(ಸಂಗ್ರಹ)*

*ಕಲಾಂ 'ಸಾರ್'ಗೊಂದು ನಮನ*

# "ಹೋಗಿ ಬನ್ನಿ ಮೇಷ್ಟ್ರೇ!"



**- ಸಿ.ಆರ್. ಸತ್ಯ**

**ಜು**ಲೈ ತಿಂಗಳ ಕೊನೆಯಲ್ಲಿ ನಮ್ಮನ್ನೆಲ್ಲಾ ಅಗಲಿ ಇಹಲೋಕಕ್ಕೆ ತ್ಯಜಿಸಿದ ಅಬ್ದುಲ್ ಕಲಾಂ ಒಂದು ದಾಖಲೆಯನ್ನೇ ಸ್ಥಾಪಿಸಿದ್ದಾರೆ. ಒಬ್ಬ ಉಪನ್ಯಾಸಕರಾಗಿ ಅವರನ್ನು ಕಳೆದುಕೊಂಡವರು ಒಬ್ಬರಲ್ಲ, ಸಾವಿರವಲ್ಲ, ಲಕ್ಷಾಂತರ ವಿದ್ಯಾರ್ಥಿಗಳು! ಅವರ ಅಗಲಿಕೆಯಿಂದ, ಮೂರು ವರ್ಷದ ಮಕ್ಕಳಿಂದ ಹಿಡಿದು ಸ್ನಾತಕೋತ್ತರ ವಿದ್ಯಾರ್ಥಿಗಳವರೆಗೂ, ಅವರ ಶಿಕ್ಷಕರೂ ಸೇರಿ, ಕಂಬನಿಯಿಟ್ಟಿದ್ದಾರೆ.

ಇಷ್ಟು ವ್ಯಾಪ್ತಿಯ ಶಿಷ್ಯಕೋಟಿಯನ್ನು ಪಡೆಯಲು ಒಬ್ಬ ವ್ಯಕ್ತಿಗೆ ಸಾಧ್ಯವೆ ಎಂದು ನಾವು ಈಗ ಆಶ್ಚರ್ಯ ಪಡಬೇಕಿದೆ. ಆದರೆ ಅವರ ವ್ಯಕ್ತಿತ್ವವನ್ನು ನಾವು ಸೂಕ್ಷ್ಮವಾಗಿ ಅವಲೋಕಿಸಿದಾಗ ಜೀವನಾನುಭವದಿಂದಲೇ ಇದು ಅವರಲ್ಲಿ ಮೂಡಿಬಂದ ಗುಣಲಕ್ಷಣವೆಂದು ಅರಿವಾಗುತ್ತದೆ.

ರಾಮೇಶ್ವರದ ಒಂದು ಸಾಧಾರಣ ಮೀನುಗಾರರ ಸಂಸಾರದಲ್ಲಿ ಹುಟ್ಟಿ, ಉನ್ನತ ಶಿಕ್ಷಣವನ್ನು ಪಡೆದು, ದೇಶದ ರಾಕೆಟ್ - ರಕ್ಷಣ ತಂತ್ರಜ್ಞಾನ ಅಭಿವೃದ್ಧಿಗೆ ಅಪಾರ ಕೊಡುಗೆಯನ್ನು ಕೊಟ್ಟು, ಕೊನೆಗೆ ರಾಷ್ಟ್ರಪತಿಯ ಪಟ್ಟವನ್ನೂ ಅಲಂಕರಿಸಿ, ವೈಭವಯುತ ರಾಷ್ಟ್ರಪತಿ ಭವನದಿಂದ ಅವರು ಹೊರನಡೆದದ್ದು ಒಬ್ಬ ಉಪನ್ಯಾಸಕರಾಗಿಯೇ! ಅವರಲ್ಲಿದ್ದ ಮಕ್ಕಳಲ್ಲಿನ ಪ್ರೇಮ ಮತ್ತು ಅವರ ವಿದ್ಯಾರ್ಥಿಗಳನ್ನು - ಅದರಲ್ಲೂ ಲಕ್ಷಾಂತರ ಚಿಕ್ಕ ಮಕ್ಕಳನ್ನೂ - ಉದ್ದೇಶಿಸಿ ಕೊಡುತ್ತಿದ್ದ ಹಿತವಚನಗಳು ಕೇಳಿದವರಿಗೆ ಪ್ರಚೋದನಕಾರಿಯಾಗಿದ್ದವು. ಅವುಗಳ ಸಾರಾಂಶ:

ಒಂದು ಮೌಲ್ಯವುಳ್ಳ ಗುರಿಯಿರಲಿ; ಅದನ್ನು ಮುಟ್ಟಲು ಶ್ರದ್ಧೆಯಿಂದ ಕಾರ್ಯಗತರಾಗಿ; ನಿಮ್ಮ ಮನೆಯಲ್ಲಿ ನೀವೊಬ್ಬ ಆದರ್ಶ ವ್ಯಕ್ತಿಯಾದರೆ, ಸಮಾಜದ, ದೇಶದ ಮತ್ತು ವಿಶ್ವದ ಉನ್ನತ ಪ್ರಜೆಯಾಗಿ ಮಾರ್ಪಾಡಾಗುತ್ತೀರಿ; ಯಾವ ಜಾತಿ ಮತ ಕುಲಗಳ ಬೇಧವೂ ಇಲ್ಲದೆ ನಾನು ಇನ್ನೊಬ್ಬರಿಗೆ ಹೇಗೆ ಸಹಾಯ ಮಾಡಬಲ್ಲೆ ಎಂಬ ಕಳಕಳಿಯನ್ನು ಇಟ್ಟುಕೊಳ್ಳಿ. ನಿಮ್ಮ 'ಹಾರುವ' ವಯಸ್ಸನ್ನು ವ್ಯರ್ಥ ಮಾಡಬೇಡಿ; ಸ್ವಚ್ಛ ಭೂಮಿಗೆ ಮತ್ತು ಪರಿಸರ ರಕ್ಷಣೆಗೆ ಶ್ರಮಿಸಿ. ರಾಷ್ಟ್ರಧ್ವಜ ಎಂದೂ ನಿಮ್ಮ ಹೃದಯದಲ್ಲಿ ಹಾರುತ್ತಿರಲಿ - ದೇಶದ ಅಭಿವೃದ್ಧಿಗೆ ಮನಸಾ ದುಡಿಯಿರಿ. ಕಲಾಂ ಅವರ ಈ ಮಾತುಗಳಲ್ಲಿ ಯಾವ ಉತ್ಪ್ರೇಕ್ಷೆಯೂ ಕಾಣುತ್ತಿರಲಿಲ್ಲ, ಕಾರಣವಿಷ್ಟೆ: ಕಲಾಂ ಅವರೇ ಈ ಮೌಲ್ಯಗಳ ಪ್ರತೀಕವಾಗಿದ್ದರು.

ತಮ್ಮ ಪ್ರೈಮರಿ, ಮಿಡಲ್ ಹಾಗೂ ಕಾಲೇಜ್ ವಿದ್ಯಾಭ್ಯಾಸವನ್ನು ಕಡು ಬಡತನದಲ್ಲೇ ಮುಗಿಸಿದರು. ನಂತರ ಒಬ್ಬ ವೈಮಾನಿಕ ತಂತ್ರಜ್ಞಾನಿಯಾಗಿ ಸ್ನಾತಕೋತ್ತರ ಪದವಿಯನ್ನು

ಪಡೆಯಲು, ಅವರ ಅಕ್ಕನವರು ತಮ್ಮ ಒಡವೆಗಳನ್ನು ಒತ್ತೆಯಿಟ್ಟು ಅವರಿಗೆ ಧನ ಸಹಾಯ ಒದಗಿಸಿದರು. ಈ ಕಾರಣದಿಂದಲೇ, ಅವರಿಗೆ ವಿದ್ಯೆಯಲ್ಲಿ ಮತ್ತು ವಿದ್ಯಾರ್ಜನೆಯನ್ನು ನೀಡುವ ಶಿಕ್ಷಕರಲ್ಲಿ ಅತ್ಯಂತ ಗೌರವ ಭಾವನೆ ಮೂಡಿ ಬಂತು. ಹಾಗೆಯೇ ಅವರ ತಂದೆ ತಾಯಿಯಲ್ಲೂ ಪೂಜ್ಯ ಭಾವನೆ ಇತ್ತು. ಅವರ ಸರಳತೆ ಮತ್ತು ಮುಗ್ಧತೆಯಿಂದ ಮಾರು ಹೋದ ಮಕ್ಕಳು ಅವರು ಯಾವ ಸಭೆಗೆ ಬಂದರೂ ಸರಿ, ''ಕಲಾಂ ಅಜ್ಜ'' ಎಂದು ಕೈ ಚಾಚಿ ಮುನ್ನುಗ್ಗುತ್ತಿದ್ದರು. ಮಕ್ಕಳ ಪೋಷಕರೂ ಅವರ ಪ್ರೀತಿ ವಾತ್ಸಲ್ಯದಲ್ಲಿ ಉದ್ವೇಗರಾಗುತ್ತಿದ್ದರು.

ಕಾಕತಾಳೀಯವೇನೋ ಎಂಬಂತೆ ಐವತ್ತು ವರುಷಗಳ ಹಿಂದೆ ನಾನು ಎಂಜಿನಿಯರ್ ಪದವಿ ಪಡೆದು ಮತ್ತು ಸ್ನಾತಕೋತ್ತರ ತರಬೇತಿಯನ್ನು ಮುಗಿಸಿ, ಕೇರಳದ ತಿರುವನಂತಪುರದಲ್ಲಿದ್ದ 'ತುಂಬಾ' ರಾಕೆಟ್ ಉಡಾವಣ ಕೇಂದ್ರಕ್ಕೆ ವೃತ್ತಿ ಪರವಾಗಿ ಸೇರಿದೆ. ಯಾವ ಅನುಭವವೂ ಇಲ್ಲದ ನನ್ನನ್ನು ಆದರದಿಂದ ತಮ್ಮ ಸಹೋದ್ಯೋಗಿಯಾಗಿ ನೇಮಿಸಿಕೊಂಡಿದ್ದು ಅಬ್ದುಲ್ ಕಲಾಂ ಅವರೇ! ಅವರು ಆಗ ಅಲ್ಲಿಯ ಒಂದು ತಾಂತ್ರಿಕ ವಿಭಾಗಕ್ಕೆ ಮುಖ್ಯಸ್ಥರಾಗಿದ್ದರು. ನಾನು ಬ್ರಹ್ಮಚಾರಿಯಾಗಿದ್ದಾಗ ಅವರೊಡನೆ ತಂಗಿದ್ದೂ ಒಂದೇ ಲಾಡ್ಜ್‌ನಲ್ಲೇ! ಕೆಲಸದ ವೇಳೆ, ಕೆಲಸದ ಹೊರತಾಗಿ, ಅವರನ್ನು ಬಹು ಹತ್ತಿರದಲ್ಲಿ ನೋಡಿ ಅವರನ್ನು ಅರಿಯುವ ಸುಯೋಗ ನನ್ನದಾಗಿತ್ತು – ಈ ಒಡನಾಟ ಐವತ್ತು ವರುಷಗಳ ಕಾಲ ಒಂದಲ್ಲಾ ಒಂದು ರೀತಿಯಲ್ಲಿ ಮುಂದುವರೆಯಿತು. ಕಾಯಕವೇ ಕೈಲಾಸ ಎಂದು ರಜೆಗಳನ್ನಾಗಲೀ ದೇಹಾಲಸ್ಯವನ್ನಾಗಲೀ ಲೆಕ್ಕಿಸದೆ ದಿನಕ್ಕೆ 12–14 ಗಂಟೆಗಳ ಕಾಲ ದುಡಿಯುವುದು ಅವರ ವ್ಯಕ್ತಿತ್ವದ ಒಂದು ಭಾಗ... (ಇದರಿಂದ, ಹೊಸದಾಗಿ ಮದುವೆಯಾಗಿಯೂ ಮನೆಯಕಡೆ ಒರಲಾರದೆ ಅವರ ಸಹೋದ್ಯೋಗಿಗಳು ಪಟ್ಟ ಪಾಡು ಅಷ್ಟಿಷ್ಟಲ್ಲ!). ಬಿಡುವಾದಾಗ ರಾಶಿ ಪುಸ್ತಕಗಳನ್ನು ಓದುವುದು, ತಮ್ಮ ಹಿರಿಯರನ್ನು ಸ್ಮರಿಸುವುದು ಅವರ ಇನ್ನೊಂದು ರೀತಿಯಾಗಿತ್ತು. ಮಿತ ಶಾಕಾಹಾರಿ ಆಹಾರ, ಸರಳ ಉಡುಪು ಅವರ 'ಹಾಲ್ ಮಾರ್ಕ್' ಆಗಿದ್ದವು. ದೇಶಕ್ಕೆ ಅವರ ತಾಂತ್ರಿಕ ಮತ್ತು ಆಡಳಿತ ಕೊಡುಗೆ ಎಲ್ಲರಿಗೂ ತಿಳಿದಿದ್ದೇ: ಭಾರತದ ಪ್ರಥಮ ಉಪಗ್ರಹ ಉಡಾವಣ ರಾಕೆಟ್ – ಎಸ್.ಎಲ್.ವಿ–3 ರ ರೂವಾರಿಯಾಗಿ; ನಂತರ ದೇಶದ ರಕ್ಷಣ ಕ್ಷೇತ್ರದಲ್ಲಿ ಭಾರತದ ರಕ್ಷಣಾ ಕ್ಷಿಪಣಿಗಳ ಅಭಿವೃದ್ಧಿ ಯೋಜನೆಗೆ ಕಾರಣಕರ್ತರಾಗಿ; ಕೇಂದ್ರ ಸರಕಾರಕ್ಕೆ ಸಲಹೆಗಾರರಾಗಿದ್ದರಿಂದ ದೇಶದ ವಿಜ್ಞಾನಿಗಳಿಗೆ, ತಂತ್ರಜ್ಞಾನಿಗಳಿಗೆ, ಉದ್ಯಮಿಗಳಿಗೆ, ಉನ್ನತ ವಿಶ್ವ ವಿದ್ಯಾನಿಲಯಗಳಿಗೆ ಮತ್ತು ಸಂಶೋಧನಾ ಸಂಸ್ಥೆಗಳಿಗೆ ಚಿರಪರಿಚಿತ ವ್ಯಕ್ತಿಯಾದರು.

ಆದರೆ ಅವರು 2002ರಲ್ಲಿ ರಾಷ್ಟ್ರಪತಿಯ ಸ್ಥಾನವನ್ನು ಅಲಂಕರಿಸಿದಾಗ ಭಾರತದ ಮಕ್ಕಳಿಗೆ ಅದು ಒಂದು ಭಾಗ್ಯವಾಗಿಯೇ ಪರಿಣಮಿಸಿತು! ರಾಷ್ಟ್ರಪತಿ ಭವನದ ಆಡಳಿತ ಕಟ್ಟುನಿಟ್ಟುಗಳನ್ನು ಒಡನೆಯೇ ಬದಿಗೊತ್ತಿ, ಅವರನ್ನು ಅಲ್ಲಿಯೇ ಕಾಣಲು ದೇಶದ ಎಲ್ಲಾ ವರ್ಗಗಳ ಜನಸ್ತೋಮಕ್ಕೂ ಅನುಕೂಲ ಮಾಡಿಕೊಟ್ಟರು. ಹಾಗಾಗಿ, ಅವರನ್ನು ಖುದ್ದಾಗಿ ಭೇಟಿ ಮಾಡಿ ಉಲ್ಲಾಸ, ಸ್ಫೂರ್ತಿ ಪಡೆಯುತ್ತಿದ್ದ ಸಂದರ್ಶಕರಲ್ಲಿ ಪುಟ್ಟ ಮಕ್ಕಳೇ ಹೆಚ್ಚಾದರು – ಅವರಲ್ಲಿ ಅಂಗವಿಕಲರಿದ್ದರು, ಕ್ರೀಡಾ ಪಟುಗಳೂ, ಸಂಗೀತ ನೃತ್ಯ ಕಲೆಗಳ

ಪರಿಣತರೂ ಇದ್ದರು. ಮತ್ತು ಸಮಾಜದ ಎಲ್ಲಾ ವರ್ಗಗಳ ಮಕ್ಕಳೂ ಇದ್ದರು, ಇದಲ್ಲದೆ ಅವರೇ ದೇಶಾದ್ಯಂತ ಪಯಣಿಸಿ ಮೂಲೆಮೂಲೆಗಳಲ್ಲಿ ಮಕ್ಕಳನ್ನು ಉದ್ದೇಶಿಸುತ್ತಿದ್ದರು – ಒಂದು ಮಾಹಿತಿಯ ಪ್ರಕಾರ ಕೇವಲ ಅಸ್ಸಾಂ ರಾಜ್ಯದಲ್ಲೇ ಅವರ ಒಡನಾಟ ಒಂದು ಲಕ್ಷ ಮಕ್ಕಳೊಡನೆ ಆಗಿತ್ತು! ಮಕ್ಕಳೆಂದರೆ ಅವರಲ್ಲಿ ಪ್ರೀತಿ ಒಡನೆಯೇ ಚಿಮ್ಮುತ್ತಿತ್ತು. ಒಂದೊಂದು ಮಗುವೂ ರಾಷ್ಟ್ರವನ್ನು ದೃಢೀಕರಿಸಬಲ್ಲ ಮೂಲ ಸಂಪತ್ತು ಎಂದು ಅವರು ನಂಬಿದ್ದರು. ಅದರಲ್ಲೂ ಅಂಗವಿಕಲ ಮಕ್ಕಳನ್ನು ಕಂಡರೆ, ಅವರ ಹೃದಯ ಕಂಪಿಸುತ್ತಿತ್ತು. ನನ್ನ ಸ್ವಂತ ಅನುಭವದ ಎರಡು ಘಟನೆಗಳ ಬಗ್ಗೆ ಹೇಳುತ್ತೇನೆ:

ರಾಷ್ಟ್ರಪತಿಗಳಾಗಿ ಅವರು ದೆಹಲಿಗೆ ಹೋದೊಡನೆ ಬೆಂಗಳೂರಿನ ಆರ್.ಟಿ. ನಗರದಲ್ಲಿ ಒಂದು ಅಂಗವಿಕಲ ಬಾಲಕ ಬಾಲಕಿಯರ ಸಭೆ ಸೇರುವುದಿತ್ತು. ನಾನು ಕಲಾಂ ಅವರನ್ನು ರೇಡಿಯೋ ಸಂಪರ್ಕದ ಮೂಲಕ ಮಕ್ಕಳೊಡನೆ ಸಂವಾದ ನಡೆಸಲು ಸಾಧ್ಯವೇ ಎಂದು ಕೇಳಿದೆ. ತಕ್ಷಣವೇ ಒಪ್ಪಿದರು. ಕಾರ್ಯಕ್ರಮಕ್ಕೆ ಅಂದು ನಾನು ಅವರಿಗೂ ಮಕ್ಕಳಿಗೂ ಇಂಗ್ಲೀಷ್–ಕನ್ನಡ ಅನುವಾದಕನಾದೆ. ''ಮಕ್ಕಳೇ ಹೊಸತಾಗಿ ಯೋಚಿಸಿ, ನಿಮ್ಮಲ್ಲಿ ಧೈರ್ಯ ಸ್ಥೈರ್ಯವಿರಲಿ, ಹೊಸ ಹಾದಿಯಲ್ಲಿ ನಡೆಯಲು ಅಂಜಬೇಡಿ, ಯಾರೂ ಅಬಲರಲ್ಲ – ನಿಮ್ಮಲ್ಲಿರುವ ಶಕ್ತಿ ರೂಪಗಳನ್ನು ಹೊರಗೆ ತನ್ನಿ!'' ಇದು ಅವರ ಅಂದಿನ ಪ್ರಶ್ನೋತ್ತರದಿಂದ ಮೂಡಿಬಂದ ಸಾರಾಂಶ. ಕೊನೆಗೆ ನನ್ನನ್ನು ಉದ್ದೇಶಿಸಿ ''ಏನು, ನಾನು ಹೇಳಿದ್ದನ್ನು ಮಾತ್ರವೇ ಅನುವಾದಿಸಿದಿರೋ ಅಥವಾ ನಿಮ್ಮದೇ ಏನಾದರು ಸೇರಿಸಿದಿರೋ?'' ಎಂದು ತಮಾಷೆಯಿಂದಲೇ ಸಂವಾದವನ್ನು ಮುಗಿಸಿದರು.

ಎರಡು ವರುಷಗಳ ಹಿಂದೆ ನಾನೊಮ್ಮೆ ಮಲ್ಲೇಶ್ವರದಲ್ಲಿ ನಡೆದ ಒಂದು ಸಂಗೀತ ಕಛೇರಿಗೆ ಹೋಗಿದ್ದೆ. ಅಲ್ಲಿ ಇಬ್ಬರು ಅಂಧ ಬಾಲಕರು (ರಿತ್ವಿಕ್ ಮತ್ತು ರೋಷನ್) ಹಾಡುತ್ತಿದ್ದುದನ್ನು ಕೇಳಿ ಆಶ್ಚರ್ಯಚಕಿತನಾದೆ! ಹುಟ್ಟು ಕುರುಡರಾಗಿದ್ದರೂ ಹಿಂದೂಸ್ತಾನಿ ಮತ್ತು ಕರ್ನಾಟಕ ಸಂಗೀತ ಪದ್ಧತಿಗಳಲ್ಲಿ ಪರಿಣತಿ ಪಡೆದು ಕನ್ನಡವಲ್ಲದೇ ಇತರೇ ಭಾಷೆಗಳಲ್ಲಿ ಭಾವ ಗೀತೆ, ದೇವರನಾಮಗಳನ್ನು ಅತ್ಯಂತ ಸುಶ್ರಾವ್ಯವಾಗಿ ಹಾಡುತ್ತಿದ್ದರು. ಮನೆಗೆ ಬಂದೊಡನೆಯೇ ನಾನು ಕಲಾಂ ಅವರಿಗೆ ಫೋನ್ ಮಾಡಿ, ''ನೀವು ಮುಂದಿನ ಬಾರಿ ಬೆಂಗಳೂರಿಗೆ ಬಂದಾಗ ಈ ಹುಡುಗರನ್ನು ಅವರ ಮನೆಯಲ್ಲೇ ಭೇಟಿ ಮಾಡಿ ಅವರ ಸಂಗೀತವನ್ನು ಆಲಿಸಬೇಕು'' ಎಂದೆ. ''ಆಗಲಿ!'' ಎಂದರು. ಎರಡು ತಿಂಗಳುಗಳ ನಂತರ ''ರಾತ್ರಿ 9.30ಗೆ ಬೆಂಗಳೂರಿಗೆ ಬರುತ್ತಿದ್ದೇನೆ. ಅವರ ಮನೆಯಲ್ಲಿ ಅರ್ಧ ಗಂಟೆಯ ಕಾಲ ಸಂಗೀತ ಕೇಳಿ ರಾಜ್ ಭವನ್‌ಗೆ ಹೊರಡುತ್ತೇನೆ. ಅವರಿಗೆ ಈ ವಿಷಯ ತಿಳಿಸಿ'' ಎಂಬ ಸಂದೇಶ ನನಗೆ ಬಂತು. ಆ ದಿನವೂ ಬಂತು. ಕಲಾಂ ಅವರಿಗೆ ತಮಿಳಿನ ಪುರಾತನ ಗ್ರಂಥ ತಿರುಕ್ಕುರಳ್ ಅಚ್ಚುಮೆಚ್ಚು. ನಾನು ಆ ಹುಡುಗರಿಗೆ ಮುಂಚಿತವಾಗಿಯೇ ಆದರಿಂದ ಆಯ್ದ ಕೆಲವು ಪದ್ಯಗಳಿಗೆ ರಾಗ ಸಂಯೋಜನೆ ಮಾಡಿ ಹಾಡಲು ಹೇಳಿದ್ದೆ. ವಿಮಾನ ನಿಲ್ದಾಣದಿಂದ ಯಲಹಂಕದಲ್ಲಿದ್ದ ಅವರ ಮನೆಗೆ ನೇರನಾಗಿ ಏರ್ ಪೋರ್ಟ್‌ನಿಂದಲೇ ಬಂದರು. ತಿರುಕ್ಕುರಳ್ ಕೇಳುತ್ತಲೇ ಭಾವುಕರಾದರು. ಅರ್ಧ ಗಂಟೆಗೆಂದು ಬಂದವರು ರಾತ್ರಿ 11 ಗಂಟೆಯವರೆಗೂ ಸಂಗೀತ ಲೋಕದಲ್ಲಿ ಮುಳುಗಿದರು. ಹೊರಡುವ ಮುನ್ನ ತಮ್ಮ ಪುಸ್ತಕಗಳ ಬ್ರೈಲ್ ರೂಪದ ಪ್ರತಿಗಳನ್ನು

ಕೊಟ್ಟು ಅವರನ್ನು ಹರಸಿದರು. ಅಷ್ಟೇ ಅಲ್ಲ, ಪಕ್ಕದಲ್ಲಿ ನಿಂತಿದ್ದ ನನ್ನ ತಂಗಿ ಡಾ. ವತ್ಸಲ ಅವರ ಕಡೆ ತಿರುಗಿ, ''ನೀವು ಕಣ್ಣಿನ ತಜ್ಞರು. ಈ ಬಾಲಕರ ಕಣ್ಣುಗಳ ವೈದ್ಯಕೀಯ



ಮಾಹಿತಿಗಳನ್ನು ನೋಡಿ ನಿಮ್ಮ ವಿಶ್ಲೇಷಣೆಯೊಂದಿಗೆ ನನಗೆ ಕಳುಹಿಸಿ. ದೆಹಲಿಯ ಐ.ಐ.ಟಿಯಲ್ಲಿ ಒಬ್ಬ ವಿಜ್ಞಾನಿ ಕೃತಕ ಕಣ್ಣುಗಳ (ಬಯಾನಿಕ್) ಬಗ್ಗೆ ಸಂಶೋಧನೆಯಲ್ಲಿ ತೊಡಗಿದ್ದಾರೆ. ಅವರು ಈ ಬಾಲಕರಿಗೆ ಯಾವುದಾದರೂ ರೀತಿಯಲ್ಲಿ ಸಹಾಯ ಮಾಡಬಹದೇ ಎಂದು ವಿಚಾರಿಸುತ್ತೇನೆ'' ಎಂದು ಹೇಳಿದರು! ಇದು ಅಂಗವಿಕಲರ ಬಗ್ಗೆ ಅವರಿಗಿದ್ದ ಅನುಕಂಪದ ಪ್ರತಿಕ್ರಿಯೆ!. ರಾಜ ಭವನದ ಕಡೆ ಅವರು ಹೊರಟು ದಾರಿಯಲ್ಲಿದ್ದಾಗ ನನಗೆ ಫೋನ್ ಮಾಡಿ, ''ಸತ್ಯ, ನಿಮಗೆ ನಾನು ಧನ್ಯವಾದಗಳನ್ನು ಅರ್ಪಿಸಬೇಕು. ಇಂದಿನ ಭೇಟಿಯನ್ನು ನಾನು ಎಂದೂ ಮರೆಯಲಾರೆ!'' ಎಂದರು. ನಾನು ಮೂಕನಾದೆ!.

ಅವರ ವ್ಯಕ್ತಿತ್ವದಲ್ಲಿ ಯಾವ ಬಗೆಯ ಗುಣಲಕ್ಷಣಗಳ ಸಮ್ಮಿಶ್ರಣವಿತ್ತು ನೋಡಿ: ಅಪಾರ ದೇಶ ಪ್ರೇಮಿ; ವಿಜ್ಞಾನಿ – ತಂತ್ರಜ್ಞಾನಿ; ಸಂಗೀತ ಪ್ರಿಯರು; ಉಪನ್ಯಾಸಕರು ಮತ್ತು ಮಕ್ಕಳ ಪ್ರೇಮಿ; ಕರ್ಮಯೋಗಿ; ಆಡಳಿತ ತಜ್ಞ; ನಲವತ್ತರಷ್ಟು ಗೌರವ ಡಾಕ್ಟೊರೇಟ್‌ಗಳನ್ನು ದೇಶದ ಅತ್ಯುನ್ನತ ಪದವಿ ಪುರಸ್ಕಾರಗಳನ್ನು ಪಡೆದರೂ ಅಹಂಕಾರವಿಲ್ಲದ ನಮ್ರ, ಸರಳ ಜೀವಿ; ಅಪ್ಪಟ ಶಾಕಾಹಾರಿ – ಹೀಗೆ!

''ಕನಸು, ಕನಸು. ಕನಸು ಕಾಣಿರಿ! ಕನಸೇ ನಿಮ್ಮ ಆಲೋಚನೆಗಳಿಗೆ ನಾಂದಿ, ಆಲೋಚನೆಗಳೇ ನಂತರ ಕ್ರಿಯಾವಿಧಿಗಳಾಗುವುದು! ಯಾವುದನ್ನೂ ಪ್ರಶ್ನಿಸಿ, ಪ್ರಶ್ನಿಸಿ, ಪ್ರಶ್ನಿಸಿ! ಪ್ರಶ್ನೆಗಳೇ ಜ್ಞಾನಾರ್ಜನೆಗೆ ಸೂತ್ರ!'' ಅವರ ಈ ಹಿತ ನುಡಿಗಳು ನಮ್ಮ ಮಕ್ಕಳಲ್ಲಿ ಎಂದೆಂದೂ ಪ್ರತಿಧ್ವನಿಸುತ್ತಿರುತ್ತವೆ. ಈ ತಿಂಗಳ 5 ನೇ ತಾರೀಖು, ಶಿಕ್ಷಕರ ದಿನಾಚರಣೆ. ಇಂತಹ ಸಮಯದಲ್ಲಿ ಕಲಾಂ ಅವರನ್ನು ಮಕ್ಕಳು ಸ್ಮರಿಸದೇ ಉಂಟೇ! ''ಮೇಷ್ಟ್ರೇ, ನಿಮಗೆ ವಿದಾಯವನ್ನಂತೂ ಹೇಳಿದ್ದೀವಿ. ಆದರೆ ಮತ್ತೊಮ್ಮೆ ಜನಿಸಿ ಬನ್ನಿ!'' ಎಂದು ಅದೆಷ್ಟು ಕಂದಮ್ಮಗಳು ಪರಿತಪಿಸುತ್ತಿವೆಯೋ!

# ಮರೆವಿನ ಪೇಚಿನ ಪ್ರಸಂಗಗಳು

**- ಡಾ. ರುದ್ರಯ್ಯ ವಿ. ಗದಗ**

ದೇವರು ಮನುಷ್ಯ ಜೀವಿಗೆ ನೀಡಿದ ಒಂದು ಶಾಪವೆಂದರೆ ಮರೆವು. ಅದು ಸರ್ವಾಂತರ್ಯಾಮಿ. ಕೆಲಸವರಲ್ಲಿ ಹೆಚ್ಚು, ಕೆಲವರಲ್ಲಿ ಕಮ್ಮಿ ಅಷ್ಟೆ. ನಾಲ್ವತ್ತರ ಆಸುಪಾಸಿನಲ್ಲಿ ತಲೆದೋರಿ ಯೌವನ ಜಾರಿದಂತೆ ಹೆಚ್ಚಾಗುತ್ತ ಹೋಗುತ್ತೆ. ಅದೊಂದು ಅದ್ಭುತ ಅಮಲು. ಅದರ ಸೆಳೆತಕ್ಕೆ ಸಿಲುಕಿದವರನ್ನು ಮರೆಗುಳಿ, ಪ್ರೊಫೆಸರ್‌ರನ್ನು 'ಅಬ್‌ಸೆಂಟ್ ಮಾಯಿಂಡೆಡ್ ಪ್ರೊಫೆಸರ್' ಎಂದು ಸಂಬೋಧಿಸುವುದು ಸರ್ವೇ ಸಾಮಾನ್ಯ. ಮರೆವಿನ ಚೆಲ್ಲಾಟ ಅನುಭವಿಸಿದವರಿಗೇ ಗೊತ್ತು.

ಒಂದು ದಿವಸ ಸಾಯಂಕಾಲ ನನ್ನ ಮನದನ್ನೆ ಹಾಲು ಹಾಕಿಸಿಕೊಳ್ಳೆಂದು ಆದೇಶಿಸಿ, ಹೆಂಗಸರ ಹರಟೆಕೂಟಕ್ಕೆ ತನಗೆ ತಡವಾಗುತ್ತೆಂದು ದಡಬಡಿಸಿ ಹೋದಳು.

ಅವಳು ಹೋದದ್ದೇ ತಡ ನಾನು ಟಿ.ವಿ. ಮುಂದೆ ಝುಂಡಾ ಊರಿದೆ. ನನಗೆ ವಿಶೇಷ ಪಾತ್ರವಾದ ಸಿಐಡಿ ನೋಡುವುದರಲ್ಲಿ ನಿರತನಾದೆ. ಮನೆಯ ಕರೆಗಂಟೆ ಸದ್ದು ಮಾಡಿತು. ನಾನು ಹೋಗಿ ಬಾಗಿಲು ತೆರೆದು ನೋಡಿದೆ. ಮೊಗದ ತುಂಬಾ ಮಂದಹಾಸ ಹರಡಿಕೊಂಡ ಹಾಲು ಮಾರುವ ಹುಡುಗ ನಿಂತಿದ್ದ. ನಾನು ಹಾಲು ಹಾಕಿಸಿಕೊಂಡು, ಅದನ್ನು ಅಡಿಗೆ ಮನೆಯಲ್ಲಿ ಕುಕ್ಕರಿಸಿಟ್ಟು, ಬಾಗಿಲು ಮುಚ್ಚಲು ಬಂದೆ. ಮುಂದಿನ ಮನೆಯ ಆವರಣದಲ್ಲಿ ಚಡ್ಡಿದೋಸ್ತು ನಿಂತಿರುವುದು ಗೋಚರಿಸಿತು. ಅದೇ ವ್ಯಾಳೇಕೆ ಕರೆಂಟು ಕಣ್ಮುಚ್ಚಿತು. ನಾನು ಬಾಗಿಲು ಮುಚ್ಚಿ ಎದುರಿನ ಮನೆಗೆ ಹಾರಿದೆ.

ನಾವು ಹಾಲಿನ ಸೋಫಾ ಮೇಲೆ ಕುಂತು, ಕಾಲೇಜು ಜೀವನದ ಘಟನಾವಳಿಗಳನ್ನು ಮೆಲುಕು ಹಾಕತೊಡಗಿದೆವು. ಸಮಯ ಸರಿದದ್ದೇ ಗಮನಕ್ಕೆ ಬರಲಿಲ್ಲ, ಕಣ್ಮರೆಯಾಗಿದ್ದ ಕರೆಂಟು ಬಗ್ಗಂತ ಬೆಳಗಿತು. ಸಾಯಂಕಾಲ ಸಮಯ 7 ಗಂಟೆ. ನನ್ನವಳು ಮನೆಗೆ ಬರುವ ಹೊತ್ತು. ಅವಳು ಬಂದಾಗ ನಾನು ಮನೆಯಲ್ಲೇ ಇರಬೇಕೆಂಬುದು ಅಲಿಖಿತ ಒಪ್ಪಂದ. ಒಂದು ವ್ಯಾಳೆ ನಾನು ಮನೆಯಲ್ಲಿರದಿದ್ರ ಮುಗೀತು ನನ್ನ ಕತೆ. ಅವಳು ಚಂಡಿ ಚಾಮುಂಡಿ ಅವತಾರ ತಾಳಿ, ದೊಡ್ಡ ಸೀನ್ ಕ್ರಿಯೇಟ್ ಮಾಡಿ, ನನ್ನ ಗ್ರಹಚಾರ ಬಿಡಿಸುತ್ತಾಳೆ. ನನಗೆ ಕಾದಿದೆ ಮಾರಿಹಬ್ಬ! ನಾನು ಎಷ್ಟೊತ್ತಿದ್ದರೂ ಅವಳು ಮನೆಗೆ ಬರುವ ಮೊದಲೇ, ಮನೆ ಸೇರಿಕೊಳ್ಳಬೇಕೆಂದು ಅಲ್ಲಿಂದ ಹೇಗೆ ಓಡಿದೆನೋ ಶಿವನೆ ಬಲ್ಲ.

ನಾನು ಗೇಟು ತೆರೆದು ಮನೆ ಆವರಣದೊಳಗೆ ಕಾಲಿಡುತ್ತಿದ್ದಂತೆ ಹೌಹಾರಿದೆ! ಬಾಗಿಲ ಮುಂದೆ ಪಿಳಿಪಿಳಿ ಕಣ್ಣು ಬಿಡುತ್ತ ಒಂಟಿ ದೆವ್ವ ಕುಂತಿತ್ತು. ಹತ್ತಿರ ಹೋಗಿ ಪರಾಮರಿಸಿ ನೋಡಿದರೆ ನನ್ನ ಅರ್ಧಾಂಗಿ. ಅವಳನ್ನು ನೋಡುತ್ತಲೇ ನಾನು ಪಾತಾಳಕ್ಕೆ ಕುಸಿದೆ. ಕಾಲಾಗಿನ ಶಕ್ತಿ ಕರಗಿ ಹೋಯಿತು. ನಾನು ಸಂಪೂರ್ಣವಾಗಿ ಬಳಲಿದೆ.

ನನ್ನ ಮುಖದರ್ಶನ ಅವಳಿಗೆ ಭೂತದರ್ಶನ! ಅವಕ್ಕಾದಳು! ಅವಳ ಮೈಯೆಲ್ಲಾ

ಭಗಭಗ ಉರಿಯಿತು. ಮುಖದ ಮೇಲೆ ಶಿವತಾಂಡವ ನೃತ್ಯ! ಆಕ್ರೋಶದಿಂದ ಕೂಗಿದಳು.

''ಅಲ್ರಿ ನಿಮ್ಗ ತಲಿಗಿಲಿ ಕೆಟ್ಟೇತೇನು? ಅಲ್ಲಿ ಹೊರಗಡೆ ಹೋಗಾಕ ಮುಂಚೆ, ತಲಬಾಗಿಲಿಗೆ ಬೀಗ ಜಡ್ದು ಹೋಗ್ಬೇಕೆನ್ನುವ ಲೋಕಜ್ಞಾನ ಇರ್ಬೇಡ್ವಾ? ಬೀಗ ಹಾಕ್ದೆ ಹೋಗೇಕೆ ನಿಮ್ಗೇನು ಬಂದಿತ್ತು, ಕೆಟಬ್ಯಾನಿ? ನಾನು ಬಂದು ನೋಡಿದ್ರ .. ಮನಿ ತುಂಬ ಮಿನುಗುವ ನಕ್ಷತ್ರ, ಗಿರಿಗಿರಿ ಸುತ್ತುವ ಫ್ಯಾನು. ತಾರಕಸ್ವರದಾಗ ಕಿರುಚೋ ಟಿ.ವಿ. ಇವೆಲ್ಲಾ ಏನು ಸೂಚಿಸ್ತಾವು? ನೀ ಮನಿ ಒಳಗಡೆ ಬಿದ್ಕೊಂಡಿರ್ಬೇಕು ಅಲ್ವಾ? ನಾನು ಹಾಂಗ ಭಾವಿಸಿ ಪದೇ ಪದೇ ಕಾಲಿಂಗ ಬೆಲ್ ಬಾರಿಸಿದೆ. ಹೂಂ ಇಲ್ಲ ... ಹಾಂ ಇಲ್ಲ...! ನಂಗೆ ಗಾಬರಿಯಾಯ್ತು. ಖರೇರಿ ನಾನು ಸುಳ್ಳು ಹೇಳ್ತಿನೇನು. ನನ್ನ ಮನದ ಪರದೆ ಮೇಲೆ ಇಲ್ಲಸಲ್ಲದ ಯೋಚನೆಗಳು ಸರಿದುಹೋದ್ವು.

ಬಚ್ಚಲು ಮನಿಯಾಗ ಕಾಲ್ಜಾರಿ ಬಿದ್ದು ಪ್ರಜ್ಞಾಹೀನನಾಗಿರಬಹುದಾ?

ತೀವ್ರ ಹೃದಯಾಘಾತಕ್ಕೆ ತುತ್ತಾಗಿ ಶಿವನ ಪಾದ ಸೇರ್ಕೊಂಡು ಬಿಟ್ನಾ? ಇಲ್ಲ ಲಕ್ವಾ ಹೊಡೆದು ಸಮಾಧಿಮರಣ ಹೊಂದಿರಬಹುದಾ? ಉತ್ತರ ಕಾಣದ ಪ್ರಶ್ನೆಗಳು.

ನೀವು ನನ್ನೆದುರು ಜೀವಂತ ನಿಂತಿರೋದು ನಂಗೆ ನಂಬಾಕ ಆಗವಲ್ದು. ನಿಮ್ಗೇನು ಆಗಿಲ್ಲ ತಾನೆ?

ದೇವ್ರು ದೊಡ್ಡಾವ. ನನ್ ಮಾಂಗಲ್ಯ ಕಾಪಾಡಿದ.

ಹೃದಯಾಂತರಾಳದ ಮಾತು.

ಇಷ್ಟೆಲ್ಲಾ ರಾದ್ಧಾಂತಕ್ಕೆ ನಂಗೆ ಜೋತು ಬಿದ್ದಿರುವ ಹಾಳಾದ್ದು ಮರೆವೇ ಕಾರಣ. ಕರೆಂಟು ಕಣ್ಣುಮುಚ್ಚಿದ ತಕ್ಷಣ ಎಲ್ಲಾ ಸ್ವಿಚ್ ಆಫ್ ಮಾಡ್ದೆ, ಮುಂದಲ ಮನೆಗೆ ಹಾರಿದ್ದು ನನ್ನ ಮರೆಗುಳಿತನದ ಸಂಕೇತ.

★ ★ ★

ಒಂದು ಸಲ ನಾನು ರೈಲಿನಲ್ಲಿ ಪ್ರಯಾಣ ಹೊರಟಿದ್ದೆ, ರೈಲು ಹತ್ತುವ ಮುಂಚೆ, ಟಿಕೆಟ್ ತೆಗೆಸಿ ಅದನ್ನು ಭದ್ರವಾಗಿರಿಸಿ, ಟೈಂಪಾಸಿಗೆಂದು ಪತ್ರಿಕೆಗಳನ್ನು ಕೊಂಡುಕೊಂಡು ರೈಲು ಏರಿದೆ.

ನಾನು ಸೀಟಿನ ಮೇಲೆ ಆರಾಮಶೀರ ಕುಂತು, ಪೇಪರ್ ಓದೋದರಲ್ಲಿ ತಲ್ಲೀನನಾಗಿದ್ದೆ. ಟಪ್.. ಟಪ್.. ಬೂಟಿನ ರಾಗಬದ್ಧ ಸದ್ದು ಬಾಗಿಲಿನಿಂದ ಸುರುವಾಗಿ, ಬರುಬರುತ್ತಾ ಸದ್ದು ಹೆಚ್ಚಾಗುತ್ತ ಬಂದು, ನನ್ನ ಬಳಿ ಹಠಾತ್ತಾಗಿ ಸದ್ದಡಗಿತು. ನಾನು ಕತ್ತೆತ್ತಿ ನೋಡಿದೆ. ಕಪ್ಪು ಸೂಟು, ಬೂಟು ಧರಿಸಿ ಟೈ ಕಟ್ಟಿಕೊಂಡ ಟಿ.ಸಿ. ಕಂಬದಂತೆ ನನ್ನೆದುರು ನಿಂತಿದ್ದ. ಅವನು ಟಿಕೆಟ್ ತೋರಿಸಲು ನನಗೆ ಆದೇಶಿಸಿದ.

ನಾನು ಟಿಕೆಟ್ ಹುಡುಕತೊಡಗಿದೆ. ಗದುಗಿನ ನಿಲ್ದಾಣದಲ್ಲಿ ಟಿಕೆಟ್ ತೆಗೆಸಿದ್ದು ನಿಚ್ಚಳವಾಗಿ ನೆನಪಿದೆ. ಆದ್ರ ಅದನ್ನು ಎಲ್ಲಿ ಬಚ್ಚಿಟಿದ್ದು ಒಂಚೂರು ನೆನಪಿಲ್ಲ. ಷರ್ಟ್,

ಪ್ಯಾಂಟ್, ಕೋಟಿನ ಕಿಸೆಗಳನ್ನೆಲ್ಲಾ ಜಾಲಾಡಿದೆ. ಟಿಕೆಟ್ ಸುಳಿವೇ ಇಲ್ಲ. ಈಗ ಟಿ.ಸಿ.ಗೆ ಟಿಕೆಟ್ ತೋರಿಸದಿದ್ರ ನನಗೆ ದಂಡ ವಿಧಿಸುವುದು ಗ್ಯಾರಂಟಿ. ನನಗೆ ಅಳುಕ ಆರಂಭವಾಯ್ತು. ಮುಖ ಕಪ್ಪಿಟ್ಟಿತು. ಮೈಯಿಡೀ ಬೆವರಿತು. ಮಿಕಿಮಿಕಿ ಟಿ.ಸಿ. ಮುಖ ನೋಡುತ್ತ ಬೆಪ್ಪುತಕ್ಕಡಿಯಂತೆ ಸುಮ್ಮನೆ ಕುಂತೆ.

ನನ್ನ ಶೋಚನೀಯ ಸ್ಥಿತಿ ಟಿ.ಸಿ.ಗೆ ಮನವರಿಕೆಯಾಯ್ತು. ಆವನಿಗೆ ನನ್ನ ಮೇಲೆ ಅನುಕಂಪ ಮೂಡಿತು.

''ಅಲ್ಲರಿ ಅದಕ್ಯಾಕ ಈ ಪರಿ ಒದ್ದಾಡ್ತಿರಾ? ನಂಗೆ ಅನಿಸೋ ಮಟ್ಟಿಗೆ ನೀವು ದಗಲ್ಬಾಜಿಯಂಥವರ ಹಾಗೆ ಕಾಣಿಸ್ತಿಲ್ಲ. ಪಕ್ಕಾ ಜಂಟಲ್‌ಮನ್. ನೀವು ಟಿಕೆಟ್ ತೆಗೆಸಿರೋದು ಖರೇನ ಅಂತ ಅನಿಸ್ತದ. ಆದ್ರ ಅದು ನಿಮ್ಮನ್ನು ಆಟ ಆಡ್ಸಾಕ ಹತ್ತೇತಿ. ನೀವೊಂದು ಕೆಲ್ಸ ಮಾಡ್ರಿ. ಆಪರೇಶನ್ ಟಿಕೆಟ್ ಪರಿಶೋಧನೆ ಮುಂದುವರಿಸಿ. ಟಿಕೆಟ್ ಸಿಕ್ರೂ ಸಿಗಬೋದು. ನಾನು ಇನ್ನೊಂದ್ಸಲ ಬಂದಾಗ ತೋರಿಸಿ ಬಿಡ್ರಿ'' ಗುಡ್‌ಲಕ್ ಹೇಳಿ ಟಿ.ಸಿ. ಪಕ್ಕದ ಬೋಗಿಗೆ ಹಾರಿದ.

ಒಂದು ತಾಸಿನ ಬಳಿಕ ಟಿ.ಸಿ. ಧುತ್ತೆಂದು ನನ್ನೆದುರು ಪ್ರತ್ಯಕ್ಷ!

''ಸಾರ್ ನಿಮ್ಗೆ ಈಗಾಗ್ಲೆ ಟಿಕೆಟ್ ಸಿಕ್ಕಿರ್ಬೇಕಲ್ವಾ? ಅದನ ನನ್ಗೆ ತೋರ್ಸಿಬಿಡಿ. ನಾನು ಡ್ಯೂಟಿ ಮುಗಿಸಿ ಮನಿಗೆ ಹೋಗ್ತೀನಿ'' ಎಂದು ಕೇಳಿದ.

''ಸುಡುಗಾಡು ಟಿಕೆಟ್ ಅದೆಲ್ಲಿ ಸಿಗ್ಬೇಕು? ಅದನ ಎಲ್ಲಿ ಇರಿಸಿನಿ ಅನ್ನೋ ಧ್ಯಾಸ ಮರ್ತು ಹೋಗೇತಿ. ಈಗ ಟಿಕೆಟ್ ಹೆಸರು ಎತ್ತಿದ್ರ ಸಾಕು, ನಂಗೆ ಜ್ವರ ಬರೋ ಹಾಂಗ ಆಗೇತಿ. ಈಗ ನಾನೇನ್ ಮಾಡ್ಬೇಕು? ತಿಳಿದ್ಹಾಂಗ ಆಗೇತಿ. ತಲೆ ಚಚ್ಕೊಳ್ಳೋ ಹಾಂಗ ಆಗೈತಿ. ಹೀಂಗಾದ್ರ ನಾನು ಏನ್ ಸಾಯ್ಲಿ?'' ನನ್ನ ಗೋಳನ್ನು ಟಿ.ಸಿ. ಮುಂದೆ ತೋಡಿಕೊಂಡೆ. ಅವನಿಗೆ ನನ್ನ ಮೇಲೆ ಮರುಕ ಉಕ್ಕಿ ಹರಿಯಿತು.

''ಈಗ ತಾವು ಮಾಡೋದು ಏನು ಉಳಿದಿಲ್ಲ. ಟಿಕೆಟ್ ಸಿಗ್ಲಿಲ್ಲ ಅಂತ ಸುಂದ ಬಡ್ದು ಕುಂತ್ಗೊಬ್ಯಾಡ್ರಿ. ಅದು ತಮ್ಮ ತಾವ ಎಲ್ಲೋ ಇರ್ಬೇಕು. ಅದು ನಿಮ್ಗೆ ಚಳ್ಳೆಹಣ್ಣು ತಿನಿಸಾಕ ಹತ್ತೇತಿ. ಇನ್ಮ್ಯಾಲೆ ಟಿಕೆಟ್ ಸಂಪೂರ್ಣ ಮರ್ತುಬಿಡಿ. ಆರಾಮಶೀರ ಪೇಪರ ಓದುತ್ತಾ ಕುಂತಬಿಡ್ರಿ'' ಎಂದು ಟಿ.ಸಿ. ತನ್ನ ಅಂತಿಮ ಅಭಿಪ್ರಾಯವನ್ನು ಪ್ರಕಟಿಸಿದ.

''ಏನಂದ್ರಿ..? ಟಿಕೆಟ್ ಮರ್ತುಬಿಡು ಅಂದ್ಯಾ? ಅದನ್ಹೆಂಗ ಮರಿಯಾಕ ಆಗ್ತದ? ಟಿಕೆಟ್ ಇಲ್ಲಂದ್ರ ನಾನು ಯಾವ ನಿಲ್ದಾಣದಾಗ ಇಳ್ಕೋಬೇಕು?''

ಇದೊಳ್ಳೆ ಫಜೀತಿಗಿಟ್ಟುಕೊಂಡಿತಲ್ಲಪ್ಪ. ಇದಕ್ಕೆಲ್ಲ ಕಾರಣ ನಂಗೆ ಗಂಟು ಬಿದ್ದಿರುವ ಮರೆವು.

ಟಿ.ಸಿ. ನನ್ನನ್ನು ಒಮ್ಮೆ ದುರುಗುಟ್ಟಿ ನೋಡಿ ಮರುಕ್ಷಣ ಮಂಗಮಾಯ!

★ ★ ★

ನನ್ನ ಅರ್ಧಾಂಗಿ ಮಗಳನ್ನು ನೋಡಿ ಬರಲು ಬಿಜಾಪುರಕ್ಕೆ ಹಾರಿದ್ದಳು. ಮನೆಯಲ್ಲಿ ನಾನೊಬ್ಬನೇ ಒಂಟಿ ದೆವ್ವ. ಮೂರುಹೊತ್ತು ಮನೆಯಲ್ಲಿ ಒಬ್ಬಂಟಿಯಾಗಿ ಸಮಯ ಕಳೆಯುವ ಕಷ್ಟ ನನ್ನ ವೈರಿಗೂ ಬೇಡ.

ಒಂದು ವಿಚಾರ ನನ್ನ ಮನದಲ್ಲಿ ಹರಳಾಯಿತು. ಅದೇನಪ್ಪಾ ಅಂದ್ರ ನಾನು ಒಂದು ದಿನದ ಮಟ್ಟಿಗೆ ಗದುಗಿನ ಪಕ್ಕದಲ್ಲೇ ಇರುವ ಕಣಗಿನಹಾಳ ಗ್ರಾಮಕ್ಕೆ ಯಾಕೆ ಹೋಗಿ ಬರಬಾರದು? ಹೋಗಿ ಬಂದ್ರ ಮನಸ್ಸು ನಿರಾಳವಾದೀತು. ಹಾಗಿದ್ರೆ ನಾಳೇನ ಹೋದರಾಯಿತೆಂದು ನಿರ್ಧಾರ ಮಾಡಿದೆ.

ಮಾರನೇ ದಿನ ಬೆಳಗ್ಗೆ ಬೇಗನೆ ಎದ್ದು ಪ್ರಾತರ್ವಿಧಿ ಮುಗಿಸಿ, ಸ್ನಾನ ಮಾಡಿ, ಡ್ರೆಸ್ ಮಾಡಿಕೊಳ್ಳುತ್ತಿರುವಾಗ ಕರೆಗಂಟೆ ಕೂಗಿತು. ಹೋಗಿ ಬಾಗಿಲು ತೆರೆದು ನೋಡಿದೆ. ಹಾಲು ಕೊಡುವ ಹುಡುಗ ತನ್ನ ಅಷ್ಟೂ ಹಲ್ಲು ಪ್ರದರ್ಶಿಸುತ್ತ ನಿಂತಿದ್ದ. ನಾನು ಸ್ಟೀಲಿನ ಪಾತ್ರೆಗೆ ಹಾಲು ಹಾಕಿಸಿಕೊಂಡು, ಅದನ್ನು ಅಡಿಗೆ ಮನೆಯಲ್ಲಿ ಕುಕ್ಕಿಟ್ಟು, ಗೋಡೆ ಗಡಿಯಾರದ ಮೇಲೆ ಕಣ್ಣು ಹಾಯಿಸಿದೆ. ಆಗಲೇ 9 ಗಂಟೆ. ನಾನು ಹತ್ತರ ಗಾಡಿ ಹಿಡಿಯಲು ಎದ್ದೆನೋ ಬಿದ್ದೆನೋ ಅಂತ ಸ್ಟೇಷನ್‌ಗೆ ಓಡಿದೆ. ಟಿಕೆಟ್ ತೆಗೆದುಕೊಂಡು ಹೋಗುತ್ತಲೇ ರೈಲಿನ ಆಗಮನವಾಯಿತು.

ನಾನು ಹಳ್ಳಿ ತಲುಪಿ, ಮನೆಯೊಳಗೆ ಕಾಲಿರಿಸುತ್ತಿದ್ದಂತೆ, ಜಿಲೇಬಿಗೆ ಮುಕುರುವ ನೊಣದಂತೆ, ಮಕ್ಕಳೆಲ್ಲಾ ನನಗೆ ಮುಗಿಬಿದ್ದರು. ನಾನು ತಂದಿದ್ದ ಕುರುಕುರೇ, ಪೆಪ್ಪರ್‌ಮೆಂಟ್ ಎಲ್ಲರಿಗೂ ಹಂಚಿದೆ. ಆಗ ನೋಡಬೇಕು ಮಕ್ಕಳ ಮೊಗದಲ್ಲಿ ಮೂಡಿದ ಮಂದಹಾಸ. ನಾನು ಮಕ್ಕಳೊಂದಿಗೆ ಸಂತೋಷದಿಂದ ಆಡಿದೆ. ಬಳಿಕ ಎಲ್ಲರೂ ಒಟ್ಟಿಗೆ ಊಟ ಮಾಡಿದೆವು. ನಂತರ ಎಲ್ಲರಿಗೂ ಬಾಯ್ ಬಾಯ್ ಹೇಳಿ ಗದುಗಿನ ಬಸ್ ಏರಿದೆ. ಆಟೋ ಹಿಡಿದು ಮನೆ ತಲುಪಿದಾಗ ಸಾಯಂಕಾಲ 4 ಗಂಟೆ. ದಣಿವಾರಿಸಿಕೊಳ್ಳಲೆಂದು ನಾನು ದಿವಾನದ ಮೇಲೆ ಮೈಚೆಲ್ಲಿದೆ.

ಅಚಾನಕ್ ಆಗಿ ಗಮನ ಅಡಿಗೆ ಮನೆಯತ್ತ ಹರಿಯಿತು. ಅಲ್ಲಿಯ ಭಯಾನಕ ದೃಶ್ಯ ನನ್ನನ್ನು ಸೂಜಿಗಲ್ಲಿನಂತೆ ಸೆಳೆಯಿತು. ನಾನು ದಿಗ್ಗನೆ ಎದ್ದು ಅಡಿಗೆ ಮನೆಗೆ ಓಡಿದೆ. ಆ ದೃಶ್ಯ ನೋಡಿ ಎದೆ ಝಲ್ಲೆಂದಿತು. ಜೀವ ಬಾಯಿಗೆ ಬಂದಂತಾಯ್ತು. ನನಗೆ ಶಾಕ್...! ಡಬಲ್ ಶಾಕ್...! ತಲೆ ತಿರುಗಿ ಬೀಳೋದೊಂದೇ ಬಾಕಿ.

ದಗದಗ ಉರಿಯುತ್ತಿದ್ದ ಗ್ಯಾಸ್ ಬರ್ನರ್ ತಕ್ಷಣ ಆಫ್ ಮಾಡಿದೆ. ಬೆಳಗ್ಗೆ ಹಾಕಿಸಿಕೊಂಡ ಲೀಟರ್ ಹಾಲು ನಾಪತ್ತೆ! ಹಾಲು ಕುದ್ದುಕುದ್ದು ಕರಕಾಗಿ ಪಾತ್ರೆಗೆ ಲೇಪನ ಬಳಿದಿತ್ತು. ಫಳಫಳ ಹೊಳೆಯುತ್ತಿದ್ದ ಸ್ಟೀಲ್ ಪಾತ್ರೆ ಕಾಗಿ ಬಣ್ಣಕ್ಕೆ ರೂಪಾಂತರ ಹೊಂದಿತ್ತು. ಮುಂಜಾನೆ 9 ಗಂಟೆಯಿಂದ ಸಾಯಂಕಾಲ 4 ಗಂಟೆವರೆಗೆ ಹಾಲು ಕುದ್ದರೆ ಮತ್ತೇನಾಗಲು ಸಾಧ್ಯ?

ಸದ್ಯ ನನ್ನ ಪುಣ್ಯ. ಏನೂ ಅನಾಹುತ ಆಗಿರಲಿಲ್ಲ. ನಾನು ನಿರಾಳ ಉಸಿರು ಬಿಟ್ಟೆ. ಈಗ ಹೊಸದೊಂದು ಸಮಸ್ಯೆ ಎದುರಾಯಿತು. ಕಪ್ಪಾದ ಸ್ಟೀಲ್ ಪಾತ್ರೆಯನ್ನು ಯಥಾ ಸ್ಥಿತಿಗೆ

ತರುವುದು ಹೇಗೆ? ಅದೂ ಊರಿಗೆ ಹೋಗಿರುವ ನನ್ನ ಮಡದಿ ಮನೆಗೆ ಮರಳಿ ಬರುವ ಮೊದಲೇ ಈಡೇರಬೇಕು. ಇಲ್ಲಂದ್ರ ಅವಳು ನನ್ನ ಗ್ರಹಚಾರನ್ನೇ ಬಿಡಿಸಿಬಿಡುತ್ತಾಳೆ. ಬೀಸೋ ದೊಣ್ಣೆಯಿಂದ ಬಚಾವಾದ್ರ ಸಾಕಪ್ಪಾ ಶಿವನೇ.

ನಾನು ಮರುದಿನವೇ 'ಮಿಷನ್ ಸ್ಟೀಲ್ ಪಾತ್ರೆ' ಶುಭ ಮುಹೂರ್ತದಲ್ಲಿ ಕೈಗೆತ್ತಿಕೊಂಡೆ. ಮನೆಯಲ್ಲಿರುವ ಡಿಶ್‌ವಾಶ್‌ಗಳಾದ ವ್ಹಿಮ್ ಬಾರ್, ವ್ಹಿಮ್ ಲಿಕ್ವಿಡ್, ವ್ಹಿಮ್ ಪೌಡರ್, ಸಬಿನಾ ಪೌಡರ್, ಸರ್ಫ್ ಪೌಡರ್ ... ಒಂದಾ ... ಎರಡಾ ... ಇದ್ದಬಿದ್ದ ವಾಶಿಂಗ್ ಏಜಂಟ್ಸ್ ಒಂದೊಂದಾಗಿ ಪಾತ್ರೆ ಮೇಲೆ ಪ್ರಯೋಗಿಸಿದೆ. ನೆಟ್ ರಿಜೆಲ್ಟ್ ಬಿಗ್ ಝೀರೋ! ನಾನು ಸಂಪೂರ್ಣ ಹತಾಶನಾದೆ. 'ಮಿಷನ್ ಸ್ಟೀಲ್ ಪಾತ್ರೆ' ಅಟರ್ ಫೈಲ್ಯೂರ್! ಅದಕ್ಕೆ ನಾನು ಎಳ್ಳುನೀರು ಬಿಟ್ಟೆ

ಒಂದು ವಾರದ ನಂತರ ನನ್ನ ಅರ್ಧಾಂಗಿಯ ಆಗಮನವಾಯಿತು. ನಾನು ಗತ್ಯಂತರವಿಲ್ಲದೆ, ವಿರೂಪಗೊಂಡ ಸ್ಟೀಲ್ ಪಾತ್ರೆಯನ್ನು ಅವಳ ಮುಸುಡಿಗೆ ಹಿಡಿದೆ. ಸದ್ಯ ಅವಳು ಸೀನ್ ಕ್ರಿಯೇಟ್ ಮಾಡಲಿಲ್ಲ, ಯಾಕಂದರೆ ಇಂಥ ಘನಂದಾರಿ ಕೆಲ್ಸ ಮಾಡೋದರಲ್ಲಿ ಅವಳು ಎತ್ತಿದ ಕೈ.

ಹಾಲಿನ ಪಾತ್ರೆಯ ದುರ್ಗತಿಗೆ ನನ್ನ ಸುಡುಗಾಡು ಮರೆವೇ ಕಾರಣ. ನಾನು ಹಳ್ಳಿಗೆ ಹೋಗೋ ಭರಾಟೆಯಲ್ಲಿ ಹಾಲು ಕಾಯಿಸಲು ಬರ್ನರ್ ಮೇಲೆ ಇಟ್ಟ ವಿಷಯ ಸಂಪೂರ್ಣವಾಗಿ ದ್ಯಾಸ ಮರೆತುಬಿಟ್ಟಿದ್ದೆ. ಮರೆವಿನ ತಮಾಷೆ ಸನ್ನಿವೇಶಗಳನ್ನು ಹೇಳುತ್ತಾ ಹೋದರೆ ಪಟ್ಟಿಯಾಗೋದು ಹನುಮಂತನ ಬಾಲ. ಮರೆವು ಮಾನವನ ಅವಿಭಾಜ್ಯ ಗುಣ. ಅದನ್ನು ಶನಿಯೆಂದು ಬಗೆಯದೆ ಸ್ನೇಹಿತನೆಂದು ಬಗೆದರೆ ಬಾಳಿನುದ್ದಕ್ಕೂ ಬೆಳದಿಂಗಳ ಹೊನಲೇ ಹರಿಯುವುದು. ಮರೆವು ಮಾನವನಿಗೆ ಬಾರದೆ ಮರಕ್ಕೆ ಬಂದೀತೇ!

✷

---

## ಸುಳ್ಳು

ಮಗ ತುಂಬಾ ಸುಳ್ಳು ಹೇಳುತ್ತಿದ್ದ. ಗಾಬರಿಗೊಂಡ ತಾಯಿ ಅವನನ್ನು ಕೂರಿಸಿಕೊಂಡು 'ಮಗು, ಸುಳ್ಳು ಹೇಳಬಾರದು ಹೇಳಿದರೆ ಕೆಂಪು ಕಣ್ಣು, ತಲೆಯ ಮೇಲೆ ಕೋಡು, ದೊಡ್ಡ ದೊಡ್ಡ ಕಿವಿ ಇರುವ ಭಯಂಕರವಾಗಿ ಕಾಣುವ ರಾಕ್ಷಸ ಬಂದು ನಿನ್ನನ್ನು ಕೊಂಡೊಯ್ದು ತುಂಬಾ ಹಿಂಸೆ ಕೊಡ್ತಾನೆ ಗೊತ್ತಾಯ್ತಾ? ಇನ್ನು ಮೇಲೆ ಸುಳ್ಳು ಹೇಳ್ತೀಯ?' ಎಂದು ಕೇಳಿದಳು.

'ಇಲ್ಲಮ್ಮ ಹೇಳೊಲ್ಲ. ನಿನಗಿಂತ ಚೆನ್ನಾಗಿ ಸುಳ್ಳು ಹೇಳೋದಿಕ್ಕೆ ನನಗೆ ಬರೋದಿಲ್ಲ' ಎಂದ ಮಗ.

*(ಸಂಗ್ರಹ)*

# ಟೋಪಿ

**– ಜೆ.ಬಿ. ಕೋಟಿ ಅನಂತ**

'**ಟೋ**ಪಿ' ಮಾರುವವನು ಊರೆಲ್ಲಾ ಟೋಪಿ ಮಾರುತ್ತಾ ಮಧ್ಯಾಹ್ನದ ಹೊತ್ತಿಗೆ ಒಂದು ದೊಡ್ಡ ಮರದ ಹತ್ತಿರ ಬಂದ. ಊಟದ ಸಮಯ. ಇಲ್ಲೇ ನೆರಳಿದೆ, ಊಟ ಮಾಡಿದರಾಯಿತು ಎಂದು ಬುತ್ತಿ ಬಿಚ್ಚಿಟ್ಟುಕೊಂಡು ಊಟಕ್ಕೆ ಕುಳಿತ... ನಿಧಾನವಾಗಿ ಊಟ ಮುಗಿಸಿ ನೀರು ಕುಡಿದು, ತೋಳಿನ ಮೇಲೆ ತಲೆ ಇಟ್ಟು ಟೋಪಿಯ ಗಂಟನ್ನು ಪಕ್ಕದಲ್ಲಿರಿಸಿಕೊಂಡು ಮಲಗಿದ. ಕೂಡಲೇ ನಿದ್ರೆ ಬಂತು.

ಆ ಮರದ ಮೇಲೊಂದು ವಾನರ ದಂಡು ಇತ್ತು. ಅವು ಮರದಿಂದ ಇಳಿದು ಚೇಷ್ಟೆ (ಕೋತಿ ಚೇಷ್ಟೆ) ಶುರುಮಾಡಿದವು. ಮೆಲ್ಲಗೆ ಟೋಪಿಯ ಗಂಟನ್ನು ತೆಗೆದುಕೊಂಡು ಮರ ಏರಿ ಕುಳಿತು ಗಂಟಿನಲ್ಲಿದ್ದ ಟೋಪಿಗಳನ್ನು ತೆಗೆದು ತಿರಗಾಮುರಗಾ ನೋಡುತ್ತಿದ್ದವು. ಒಂದು ಬುದ್ಧಿವಂತ ಕೋತಿ ಅದನ್ನ ತಲೆಗೆ ಹಾಕಿಕೊಂಡಿತು. ಉಳಿದವು ಹಾಂ ಎನ್ನುತ್ತಾ ಅದನ್ನೇ ಮಾಡಿದವು. ಟೋಪಿ ತಲೆಗೇರಿದರೆ ಸುಮ್ಮನಿರಲಾದೀತೇ. ಊಹೂಂ., ನೆಗೆದಾಡುವುದು, ಥೈತಕ ಥೈತಕ ಕುಣಿಯುತ್ತಾ ಕಿರುಚುತ್ತಿದ್ದವು. ದಿಢೀರ್ ಎಚ್ಚರಗೊಂಡ ಟೋಪಿ ಮಾರುವವನು ತಲೆ ಎತ್ತಿ ನೋಡಿದ. ಅವನು ಮಾರಲು ತಂದ ಟೋಪಿ ಮಂಗಗಳ ತಲೆಗೇರಿದ್ದವು. ಕಾಡಿದ, ಬೇಡಿದ.. ಕೊಡಿ ಎಂದ. ಊಹೂಂ, ಅವು ಕೊಡಲಿಲ್ಲ, ಕೂಡಲೇ ಅವನಿಗೊಂದು ಉಪಾಯ ಹೊಳೆಯಿತು. ಅಣ್ಣಾ ವಾನರಮಿತ್ರರೇ, ಹೇಳಿ, ನೀವು ಯಾವ ಪಕ್ಷ ಎಂದ. ಆ ವಾನರ ಗುಂಪು ನಾವು 'ವಾನರ ಪಕ್ಷ' ಎಂದು ಒಕ್ಕೊರಲಿನಿಂದ ಕೂಗಿದವು. ಟೋಪಿ ಮಾರುವವನು ಕೂಡಲೇ ಮತ್ತೆ ನೀವು ಹಾಕಿಕೊಂಡಿರುವುದು 'ಕೈ' ಪಕ್ಷದ ಟೋಪಿ ಎಂದ. ಕೂಡಲೇ ವಾನರ ಮಿತ್ರರು ಅಯ್ಯೋ ಮಹಾಪರಾಧ ಎನ್ನುತ್ತಾ ಎಲ್ಲಾ ಟೋಪಿಗಳನ್ನು ಕೆಳಗೆಸೆದವು.

ಟೋಪಿ ಮಾರುವಾತ ಎಲ್ಲವನ್ನೂ ಜೋಡಿಸಿ ಗಂಟಿಗೆ ಸೇರಿಸಿ ಹೆಗಲಿಗೇರಿಸಿ ಮುಂದೆ ಹೊರಟ, ಟೋಪಿ ಮಾರುತ್ತ.


✷

**ಒಂದು ಮಾತು**

ಒಂದು ದಿನ ಗಂಡ ಹೆಂಡ್ತೀನ – ನಾನು ಆಫೀಸಿಂದ ಬರುವಾಗ ಒಂದು ಹುಡುಗೀನ ಕರ್ಕೊಂಡು ಬಂದು
ಇವಳು ಇನ್ನು ಮೇಲೆ ನಮ್ಮನೇಲೇ ಇರ್ತಾಳೆ ಅಂದ್ರೆ ನೀನು ಏನು ಮಾಡ್ತೀಯ – ಅಂತ ಕೇಳಿದ
ಅದಕ್ಕೆ ಹೆಂಡತಿ ಈ ಮಾತನ್ನು ನಾನು ನಿಮಗೆ ಕೇಳಿದರೆ ನೀವು ಏನು ಮಾಡ್ತೀರೋ ಅದನ್ನೇ
ನಾನೂ ಮಾಡ್ತೀನಿ ಅಂದಳು.

# ಕೊರವಂಜಿ ಪದಬಂಧ – 21

- ವಿದ್ಯಾ ವಿ. ಹಾಲಭಾವಿ



**ಎಡದಿಂದ ಬಲಕ್ಕೆ**

1. ವಿರಸ ಮುಗಿದ ಮೇಲೆ ಪ್ರೀತಿಯ ಮಾತು (3)
3. ವನದಲ್ಲಿದೆಯೇ ವರನ ಆದಾಯ? (4)
5. ನಯವಾಗಿ ಹೊಳೆಯುವ ಕಣ್ಣು (3)
7. ಮಸ್ಕಾ ಹೊಡೆದು, ನರನಿಗೆ ಸಲ್ಲಿಸಿದ ವಂದನೆ (5)
9. ನೀರಲ್ಲ, ಮಾದಕ ಪಾನೀಯ (2)
10. ಹಗರಣದಲ್ಲಿ ಉಲ್ಟಾಪಲ್ಟಿಯಾದ ದುಡ್ಡು (2)
11. ಗೆಲುವನ್ನು ಪಡೆದವನೀತ (4)
14. ತ್ವರಿತವಾಗಿ ನೋಡಿಬಿಡಿ ಈ ತೀಕ್ಷ್ಣತೆಯನ್ನ! (3)
16. ಎಲ್ಲೆಯ ಬಳಿಯಿರುವ ಕಾಲ ಸೂಚಕಯಂತ್ರ (4)
17. ಸಾಂಬ್ರಾಣಿ ಮಾರುವವ, ಬಲು ನೀಚನಂತೆ (3)

**ಮೇಲಿಂದ ಕೆಳಕ್ಕೆ**

1. ಮಾನವಂತನಿಗೇ ಈ ಆದರ (3)
2. ದನ ನುಗ್ಗಿರುವ ಮನೆಯಿದು (3)
3. ಕಾಡು ಹೂವು ಇಲ್ಲಿದೆ (4)
4. ಜುಲುಮೆಯಿಂದ ಮೂಡಿದ ಅನುರಾಗ (3)
6. ಈತ ನರಕದ ಅರಸ (4)
7. ಇದು ಖಂಡಿತಾ ಅಸಲಿಯಲ್ಲ ಬಿಡಿ! (3)
8. ಈ ಸೋಂಭೇರಿಗೆ ಕೇಳಿಸಿದ್ದು, ಯುದ್ಧದ ನಗಾರಿ (4)
12. ಶಾಕ್ ಆಯಿತೇ? ಇದು ಪಕ್ಕಾ ಸಸ್ಯಾಹಾರ (4)
13. ರಾಗ ಕೇಳಿದ್ದಕ್ಕೇ ಈ ವೈರಾಗ್ಯ? (3)
14. ವನದ ಬಳಿ ಮಾಡಿದ ಹೋಮ (3)
15. ನೀರು ನೀಡಿ ತಣಿಸಿದ ಯುವತಿ (3)

*(ಉತ್ತರಕ್ಕೆ 40ನೇ ಪುಟ ನೋಡಿ)*

Advertisement

**Advertisement**

# ಸುವರ್ಣ ಸಿಂಗಪುರ

**- ರೇಖಾ ಹೆಗಡೆ ಬಾಳೇಸರ**

ಇದೇ ಆಗಸ್ಟ್ 9ರಂದು ಸಿಂಗಪುರ ಸ್ವತಂತ್ರ ರಾಷ್ಟ್ರವಾಗಿ 50 ವರ್ಷಗಳಾದವು. ಆಯಕಟ್ಟಿನ ಜಾಗದಲ್ಲಿರುವ ಈ ಪುಟ್ಟ ದ್ವೀಪದಲ್ಲಿ ವಸಾಹತು ಸ್ಥಾಪಿಸಿದ್ದ ಬ್ರಿಟೀಷರು ಗಂಟುಮೂಟೆ ಕಟ್ಟಿಕೊಂಡು ಹೋಗಿದ್ದು 1963ರಲ್ಲಿ. ಮುಂದೆ ದಾಯಾದಿ ಮಲೇಷ್ಯದ ಹಿಡಿತದಲ್ಲಿದ್ದ ಇದು, ಅಂತೂ ಸ್ವಾಯತ್ತತೆ ಪಡೆದಿದ್ದು 1965ರಲ್ಲಿ. ಅಲ್ಲಿಂದ ಮುಂದೆ ದೇಶದ ಬೆಳವಣಿಗೆ ಏನಿದ್ದರೂ ಗಗನಮುಖಿಯಾಗಿ, ಇಲ್ಲಿನ ಪ್ರಮುಖ ವಾಣಿಜ್ಯ ವ್ಯವಹಾರ ಪ್ರದೇಶದಲ್ಲಿ ಎದ್ದಿರುವ ಗಗನಚುಂಬಿ ಕಟ್ಟಡಗಳಂತೆ. ಬ್ರಿಟೀಷರು ಬಿಟ್ಟುಹೋಗುವಾಗ ಪುಟ್ಟ ಬಂದರು ಪಟ್ಟಣವಾಗಿದ್ದ ಇದು ಇಂದು ಜಗತ್ತಿನ ನಾಲ್ಕನೇ ದೊಡ್ಡ ವಾಣಿಜ್ಯ ಕೇಂದ್ರ, ನಾಲ್ಕನೇ ಅತ್ಯಂತ ದುಬಾರಿ ನಗರವೂ ಹೌದು!

ಆಗ್ನೇಯ ಏಷಿಯಾದಲ್ಲಿ ರಾಜಕೀಯವಾಗಿ ಅತ್ಯಂತ ಸ್ಥಿರತೆ ಹೊಂದಿದ, ಪುಟ್ಟದಾದರೂ ಬಲಿಷ್ಠ ಹಾಗೂ ತಾಂತ್ರಿಕವಾಗಿ ಮುಂದುವರಿದ ಸಶಸ್ತ್ರಬಲ ಹೊಂದಿದ ದೇಶ ಇದು. ಆರ್ಥಿಕತೆಯ ದೃಷ್ಟಿಯಲ್ಲಿ ಸುತ್ತಮುತ್ತಲ ದೇಶಗಳಿಗೆಲ್ಲ ದೊಡ್ಡಣ್ಣ. ಇಂತಿಪ್ಪ ಸಿಂಗಪುರ ತನ್ನ ಸುವರ್ಣ ಸ್ವಾತಂತ್ರ್ಯ ದಿನವನ್ನು ಮಾಮೂಲಿಯಾಗಿ ಆಚರಿಸೀತೇ? ನಿರೀಕ್ಷೆಯ ಮಟ್ಟವನ್ನು ಮೀರಿದ ವಿಜೃಂಭಣೆ, ಆಡಂಬರ ಈ ಸಲದ ಆಚರಣೆಯಲ್ಲಿತ್ತು. ವೈವಿಧ್ಯಮಯ ಕಾರ್ಯಕ್ರಮ, ಕಸರತ್ತುಗಳನ್ನೊಳಗೊಂಡ ಪರೇಡ್, ಯುದ್ಧ ವಿಮಾನಗಳ ಕವಾಯಿತು, ಸುಡುಮದ್ದಿನ ಬಾಣ ಬಿರುಸು ಪ್ರದರ್ಶನ.... ಏನಿರಲಿಲ್ಲ ಅಲ್ಲಿ! ವಾರಾಂತ್ಯದಲ್ಲಿ ರಾಷ್ಟ್ರೀಯ ಹಬ್ಬ ಬಂದಿದ್ದರಿಂದ ಹಿಂದೊಂದು ದಿನ, ಮುಂದೊಂದು ದಿನ ಎಕ್ಸ್ಟ್ರಾ ರಜೆ ಸೇರಿ ಗಮ್ಮತ್ತು ಹೆಚ್ಚಿತ್ತು.

**ಕೆಂಪಾದವೋ ಎಲ್ಲ ಕೆಂಪಾದವೋ:** ಆಂಗ್ಲ ಭಾಷೆಯಲ್ಲಿ ಭಾರಿ ಸಂಭ್ರಮ, ಮೋಜಿನಿಂದ ಆಚರಿಸುವುದನ್ನು ವಿವರಿಸುವ 'ಪೇಯಿಂಟ್ ದ ಟೌನ್ ರೆಡ್' ಎಂಬ ನುಡಿಕಟ್ಟೊಂದಿದೆ. ಸ್ವಾತಂತ್ರ್ಯ ದಿನದ ವಾರಾಂತ್ಯದಲ್ಲಿ ಸಿಂಗಪುರದಲ್ಲಿ ಈ ಮಾತು ಯಥಾವತ್ ಅವತರಿಸಿತ್ತು. ಮೊದಲೇ 'ಲಿಟಲ್ ರೆಡ್ ಡಾಟ್' ಎಂಬ ಅಡ್ಡಹೆಸರು ಈ ದೇಶಕ್ಕೆ. ಜೊತೆಗೆ ಯಾವುದೇ ವಿಶೇಷ ದಿನ/ಹಬ್ಬ ಬಂತೆಂದರೆ ಅದಕ್ಕೆ ಸಂಬಂಧಿಸಿದ ಸ್ಲೋಗನ್ ಅಥವಾ ಬಣ್ಣ ಹೊತ್ತ ಅಂಗಿ ತೊಟ್ಟು ಸಂಭ್ರಮಿಸುವ ಜನ ಇಲ್ಲಿ. ಇನ್ನು ಸುವರ್ಣ ಸ್ವಾತಂತ್ರ್ಯ ದಿನ ಎಂದರೆ ಕೇಳಬೇಕೆ? ಪ್ರಜೆಗಳು, ಪ್ರಭುಗಳು... ಕೊನೆಗೆ ನನ್ನಂಥ ಪರದೇಶಿ ನಾಗರಿಕರು ಸಹ ಸಿಂಗಪುರ ಧ್ವಜದಲ್ಲಿರುವ ಕೆಂಪು, ಬಿಳಿ ಬಣ್ಣಗಳ ಬಟ್ಟೆ ತೊಟ್ಟು ರಂಗೇರಿಸಿದರು. ದ್ವೀಪರಾಷ್ಟ್ರದುದ್ದಗಲಕ್ಕೆ ಸಂಚರಿಸುವ ಟ್ರೇನುಗಳಲ್ಲಿ, ಬಸ್ಸುಗಳಲ್ಲಿ ಬಹುಪಾಲು ಜನರಿದ್ದು ಕೆಂಪಂಗಿ, ಬಿಳಿ ಚಡ್ಡಿ/ಪ್ಯಾಂಟು. ಅವಿಲ್ಲವೆಂದರೆ ಕನಿಷ್ಠ ಕೆಂಪು

ಟೊಪ್ಪಿ, ಕೈಚೀಲ, ಚಪ್ಪಲಿ ಹಾಕಿ ಮೆರೆದವರು ಹಲವರು. ರಜೆ ಶುರುವಾಗುವ ಹಿಂದಿನ ದಿನವೇ ಶಾಲಾ-ಕಾಲೇಜುಗಳಲ್ಲಿ ಸ್ವಾತಂತ್ರ್ಯ ದಿನ ಆಚರಿಸಿದ್ದು, ಅಂದೂ ಕೆಂಪು-ಬಿಳಿ ವಸ್ತ್ರ ಧರಿಸಿ ಬರಲು ಮಕ್ಕಳಿಗೆ ನಿರ್ದೇಶಿಸಲಾಗಿತ್ತು. ಅಜ್ಜ-ಅಜ್ಜಿ, ಯುವಜನ, ಮಕ್ಕಳು ಮರಿ ಎನ್ನದೇ ಕೆಂಪಿನ ಪೆಂಪು ಮೆರೆದವರೇ ಎಲ್ಲ. ಸರ್ಕಾರ ನಿರ್ಮಿತ ಸಾಲು ಸಾಲು ಹೌಸಿಂಗ್ ಬೋರ್ಡ್ ಗೃಹಸ್ತೋಮಗಳ ಕಾರಿಡಾರುಗಳಿಂದಲೂ ಧ್ವಜಗಳ ಸರಮಾಲೆ ಇಳಿಬಿದ್ದಿದ್ದರಿಂದ ಕಟ್ಟಡಗಳೂ ಕೆಂಪು-ಬಿಳಿ ಬಟ್ಟೆ ತೊಟ್ಟಿದ್ದವೆನ್ನಲಡ್ಡಿಯಿಲ್ಲ. ಪ್ರವಾಸಿಗರು ಜಮೆಗೊಳ್ಳುವ ಪ್ರದೇಶಗಳಲ್ಲಿ ಕೆಲವು ಪ್ರಮುಖ ಕಟ್ಟಡಗಳೂ ಕೆಂಬಣ್ಣದಲ್ಲಿ ಮಿಂದೆದ್ದಿದ್ದವು.

ಅಷ್ಟೇ ಅಲ್ಲದೇ ಅಲ್ಲಿ-ಇಲ್ಲಿ, ಎಲ್ಲಿ ಬೇಕೆಂದರಲ್ಲಿ ಅಂಟಿಸಿಕೊಳ್ಳಬಹುದಾದ ಎಲ್ಲಾ ಸೈಜಿನ ಧ್ವಜಗಳು, SG50 ಎಂದು ಸಾರುವ ಅಂಗಿಗೆ ಚುಚ್ಚಿಕೊಳ್ಳುವ ಬ್ಯಾಡ್ಜ್, ಕಾರಿನ ಗ್ಲಾಸಿಗೆ, ಬೆನ್ ಕನ್ನಡಿಗೆ ಅಂಟಿಸುವ ಬ್ಯಾನರುಗಳು, ಹಚ್ಚೆ, ಕರವಸ್ತ್ರ, ತಲೆವಸ್ತ್ರ... ಹೀಗೆ ಎಲ್ಲೆಲ್ಲೂ ಸುವರ್ಣ ಸ್ವಾತಂತ್ರ್ಯೋತ್ಸವದ ರಂಗು ಹತ್ತಿತ್ತು. ಉಕ್ಕಿ ಹರಿದ ದೇಶಭಕ್ತಿಯ ಮಹಿಮೆಯಿಂದ ಸಾವಿರಾರು ಡಾಲರ್ ಬೆಲೆ ಬಾಳುವ ಲಕ್ಷುರಿ ಕೈಚೀಲ ತಯಾರಿಕರಿಂದ ಹಿಡಿದು ಬಳಸಿ ಮುದ್ದೆ ಮಾಡಿ ಒಗೆಯುವ ಟಿಶ್ಯೂ ಪೇಪರ್ ತಯಾರಕರವರೆಗೆ ಹಲವು ಉದ್ಯಮಿಗಳು ಕಿಸೆ ತುಂಬಿಸಿಕೊಂಡರು.

SG50 ಅಂಗವಾಗಿ ಆಗಸ್ಟ್ 9ರಂದು ಬಸ್ಸು, ಟ್ರೇನುಗಳಲ್ಲಿ ಟಿಕೆಟ್ ಇಲ್ಲದೇ ಪ್ರಯಾಣಭಾಗ್ಯ ಎಲ್ಲರಿಗೂ. ಬೆಳ್ಳಂಬೆಳಿಗ್ಗೆಯಿಂದಲೇ ಎಲ್ಲ ರೈಲು ನಿಲ್ದಾಣಗಳಲ್ಲಿ ತಡೆರಹಿತ ಪ್ರವೇಶದ ವ್ಯವಸ್ಥೆ. ಬಸ್ಸುಗಳಲ್ಲೂ ಅಷ್ಟೇ, ಕಾರ್ಡ್ ಉಜ್ಜುವ ಪ್ರಮೇಯವೇ ಇಲ್ಲ. ಎಲ್ಲಿ ಹತ್ತಿ ಎಲ್ಲಿ ಬೇಕೆಂದಲ್ಲಿ ಇಳಿಯಬಹುದಿತ್ತು. ಇದರಿಂದ ಸಾರಿಗೆ ಸಂಸ್ಥೆಗಳಿಗೇನೂ ನಷ್ಟವಿರಲಿಕ್ಕಿಲ್ಲ ಬಿಡಿ, ವಾರಾಂತ್ಯಕ್ಕೆ ಹೆಚ್ಚುವರಿ ರಜೆ ಇದ್ದಿದ್ದರಿಂದ ಬಹಳಷ್ಟು ಮಂದಿ ದ್ವೀಪದಾಚೆ ಪ್ರವಾಸ ಹೋಗಿದ್ದರು. ಇಲ್ಲೇ ಉಳಿದ ಜನರಾದರೂ ಎಷ್ಟು ಮಹಾ ಪ್ರಯಾಣ ಮಾಡಲು ಸಾಧ್ಯ? ಇಡೀ ಸಿಂಗಪುರ ದೇಶವೇ ಪೂರ್ವದಿಂದ ಪಶ್ಚಿಮಕ್ಕೆ 50 ಕಿಮೀ, ಉತ್ತರದಿಂದ ದಕ್ಷಿಣಕ್ಕೆ 26 ಕಿಮೀ ಇದೆ! ಇದೇ ಕಾರಣಕ್ಕೆ ಸೂಪರ್ ಸಾನಿಕ್ ಯುದ್ಧ ವಿಮಾನಗಳೂ ಸದ್ದಿಗಷ್ಟೇ, ವೇಗ ಏನಿದ್ದರೂ ಇಳಿಸಿಕೊಂಡು ಅಲ್ಲಲ್ಲೇ ಸುತ್ತು ಹೊಡೆಯಬೇಕು!

ಮತ್ತೆ 'ಉಚಿತ ಭಾಗ್ಯ'ಕ್ಕೆ ಬರೋಣ, ಇದು ಸಾರಿಗೆಗಷ್ಟೇ ನಿಂತಿರಲಿಲ್ಲ, ಇಲ್ಲಿನ ಜಗತ್ಪ್ರಸಿದ್ಧ ಪ್ರಾಣಿ ಸಂಗ್ರಹಾಲಯ, ಹಲವಾರು ವಸ್ತುಸಂಗ್ರಹಾಲಯಗಳು, ಸೈನ್ಸ್ ಸೆಂಟರ್, ಇನ್ನೂ ಹತ್ತು ಹಲವು ಕಡೆ ಸಿಂಗಪುರ ನಾಗರಿಕರಿಗೆ, 'ಶಾಶ್ವತ ನಿವಾಸಿ' ಸ್ಥಾನಮಾನ ಇರುವವರಿಗೆ, ವಿಶೇಷವಾಗಿ ಹಿರಿಯ ನಾಗರಿಕರಿಗೆ ಅವತ್ತು ಉಚಿತ ಪ್ರವೇಶ. ಇನ್ನೊಂದಿಷ್ಟು ಕಡೆ ವಿಶೇಷ ಡಿಸ್ಕೌಂಟ್. ಈ ಇಡೀ ವರ್ಷದಲ್ಲಿ ಹುಟ್ಟುವ ಎಲ್ಲ ಶಿಶುಗಳಿಗೆ 'ಜುಬಿಲಿ ಬೇಬಿ' ಕೊಡುಗೆಗಳಾದರೆ ವಿವಿಧ ವಯೋಮಾನದವರಿಗೆ ವಿವಿಧ ಸರ್ಕಾರಿ ಸಂಸ್ಥೆಗಳ ವತಿಯಿಂದ ತರಹೇವಾರಿ ಸಿಹಿ ಸಿಹಿ ಸವಲತ್ತುಗಳು. ಇಲ್ಲಿ ಉಳಿದು ಸ್ಥಳೀಯರಿಗಿಂತ ಹೆಚ್ಚುವರಿ ತೆರಿಗೆ ಕಟ್ಟುತ್ತಾ ಜೀವನ ಮಾಡುವ ವಿದೇಶೀಯರು ಮಾತ್ರ

‘ದ್ರಾಕ್ಷಿ ಹುಳಿ’ ಎನ್ನುತ್ತ ಸಮಾಧಾನ ಮಾಡಿಕೊಳ್ಳಬೇಕಷ್ಟೇ! ಅಥವಾ ‘ಥೋ, ಸಿಕ್ಕಾಪಟ್ಟೆ ರಷ್ಷು, ಹಾಗಾಗಿ ಹೋಗಲಿಲ್ಲ’ ಎಂದು ಸಮಝಾಯಿಶಿ ಹೇಳಿಕೊಳ್ಳಬೇಕು.

ಸಿಂಗಪುರದ ಪ್ರಗತಿಯನ್ನು ಸಾರುವ, ಜನ ಜೀವನದ ಚಿತ್ರಣ ನೀಡುವ, ಸಂಸ್ಕೃತಿಯ ಸೊಬಗ ಸಾರುವ ನೆರಳು ಬೆಳಕಿನ, ರಂಗುರಂಗಿನ ಸಂಗೀತ ರೂಪಕಗಳು ಇಲ್ಲಿನ ಜನಪ್ರಿಯ ಗಾರ್ಡನ್ಸ್ ಬೈ ದ ಬೇ, ಮರೀನಾ ಬೇ, ಸೆಂಟೋಸಾ ಮತ್ತಿತರ ಕಡೆ ಹೋಗಿ ಬರುವವರ ಮನ ಸೆಳೆಯುವಂತಿದ್ದವು. ಈ ಮೊದಲೆರಡು ಜಾಗಗಳು ಸಮುದ್ರವನ್ನು ಹಿಂದಿಕ್ಕಿ ಮಣ್ಣು ಹೊಯ್ದು ಸೃಷ್ಟಿ ಮಾಡಿದ ಪ್ರದೇಶದಲ್ಲಿ ತಲೆ ಎತ್ತಿರುವ ಅದ್ಭುತಗಳು. ಇಲ್ಲಿರುವ ಒಂದೊಂದು ಕಟ್ಟಡಗಳೂ ಸುಧಾರಿತ ತಂತ್ರಜ್ಞಾನದ ಮಾಡೆಲ್‌ಗಳಿದ್ದಂತೆ. ಇಂಥ ಜಾಗಗಳಲ್ಲಿ ಸಂಗೀತ-ಬೆಳಕಿನ ಕಾರ್ಯಕ್ರಮ ಮಾಡಿದರೆ ನವಿಲಿಗೆ ಬಣ್ಣ ಬಳಿದಂತೆ.

ಗೋಲ್ಡನ್ ಜುಬಿಲಿ ಸಂಭ್ರಮ ಸ್ವಾತಂತ್ರ್ಯ ದಿನದೊಂದಿಗೆ ಮುಗಿದಿಲ್ಲ, ವರ್ಷಪೂರ್ತಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ ಸರ್ಕಾರ. ಸರ್ಕಾರದ ಬಳಿ ಸಾಕಷ್ಟು ದುಡ್ಡಿದೆ. ಪುಟ್ಟ ದೇಶವಾದ್ದರಿಂದ ಯೋಜನೆ, ಸವಲತ್ತು, ಸೌಕರ್ಯಗಳು ಜನರನ್ನು ತಲುಪಲು ತಡ ಇಲ್ಲ. ಕಾನೂನಿನ ಕಟ್ಟುನಿಟ್ಟು ಪರಿಪಾಲನೆ ಮಾಡುವುದರಿಂದ ಆಗಬೇಕಾದ ಕೆಲಸಗಳೆಲ್ಲ ತ್ವರಿತ ಆಗಿ ಪ್ರಗತಿ ಕೈಗೆಟುಕಿದೆ. ನಿಜ ಹೇಳಬೇಕೆಂದರೆ ಸುವರ್ಣ ವರ್ಷವಲ್ಲ, ಸುವರ್ಣ ಸದೃಶ ಜೀವನ ಇಲ್ಲಿನ ನಾಗರಿಕರದು.

✳

## ಅಕ್ರಮ ಸಕ್ರಮ

ಹದ್ದು ಮೀರಿದರೆ, ಕ್ಷಮಿಸಿ ಸರಹದ್ದು ಮೀರಿದರೆ, ಅಂದರೆ ಒಂದು ದೇಶದ ಗಡಿಯನ್ನು ಅಕ್ರಮವಾಗಿ ದಾಟಿದರೆ ಏನಾಗುತ್ತದೆ ಗೊತ್ತೆ?

ಉತ್ತರ ಕೊರಿಯಾಕ್ಕೆ ಹಾಗೆ ಪ್ರವೇಶಿಸಿದರೆ 12 ವರ್ಷ ಕಠಿಣ ಶಿಕ್ಷೆ – ಯಾವುದೋ ಒಂದು ಅಜ್ಞಾತ ಜೈಲಿನಲ್ಲಿ. ಆಫ್ಗನ್ ಗಡಿ ದಾಟಿದರೆ ಗುಂಡೇಟು; ಸೌದಿ ಅರೇಬಿಯಾದಲ್ಲಿ ಜೈಲು ವಾಸ; ಚೀನಾಕ್ಕೆ ಪ್ರವೇಶಿಸಿದರೆ ಗತಿ ಏನಾಗುತ್ತದೊ ಹೇಳಲಾಗದು, ತಿಳಿಯುವುದೂ ಇಲ್ಲ. ಕ್ಯೂಬಾದಲ್ಲೂ ಜೈಲು ಶಿಕ್ಷೆ; ಬ್ರಿಟನ್ ಪ್ರವೇಶಿಸಿದರೆ ಸೆರೆಮನೆ ವಾಸ ನಂತರ ಗಡೀಪಾರು. ಆದರೆ, ಭಾರತ ಪ್ರವೇಶಿಸಿದರೆ?

ರೇಷನ್ ಕಾರ್ಡ್, ಪಾಸ್ ಪೋರ್ಟ್, ಡ್ರೈವಿಂಗ್ ಲೈಸೆನ್ಸ್, ಕ್ರೆಡಿಟ್ ಕಾರ್ಡ್, ಯಾವುದೋ ಆವಾಸ್ ಯೋಜನೆಯಡಿ ಒಂದು ಪುಟ್ಟ ಮನೆ ಅಥವಾ/ಮತ್ತು ಮನೆ ಕಟ್ಟಲು ಸಾಲ; ಉಚಿತ ಶಿಕ್ಷಣ, ಚಿಕಿತ್ಸೆ ಮತ್ತು ಭ್ರಷ್ಟ ರಾಜಕಾರಣಿಯನ್ನು ಆಯ್ಕೆ ಮಾಡಲು ವೋಟರ್ ಕಾರ್ಡ್!

ಎಷ್ಟು ವಿಶಾಲ ಮನಸ್ಸಿನವರು ನಾವು ನೋಡಿ..

*(ಸಂಗ್ರಹ)*

– ದಂಠಳ

- ಪುನರ್ಜನ್ಮ ಎಂಬುದಿಲ್ಲ. ಏಕೆಂದರೆ ದೇವರು ಮತ್ತೊಮ್ಮೆ ಅದೇ ತಪ್ಪು ಮಾಡುವುದಿಲ್ಲ. ನೆನಪಿರಲಿ.
- ನಾನು ಅಸೆಂಬ್ಲಿಯಲ್ಲಿ ಎದ್ದು ನಿಂತು ಭಾಷಣ ಮಾಡಿದ ಹಾಗೆ ರಾತ್ರಿ ನನಗೆ ಕನಸು ಬಿತ್ತು. ಎಚ್ಚರ ಆದಾಗ ನೋಡಿದರೆ ಅದು ನಿಜವಾಗಿತ್ತು.
- ಬ್ಲಡ್ಡೂ ದುಡ್ಡೂ ಎರಡೂ ಸರ್ಕುಲೇಟ್ ಆಗುತ್ತಿರಬೇಕು.
- ಹಿ ಓಪನ್ಸ್ ಹಿಸ್ ಮೌತ್ ಓನ್ಲಿ ಟು ರಿಮುವ್ ಒನ್ ಫುಟ್ ಅಂಡ್ ಫುಟ್ ಅನದರ್ ಇನ್.
- ಪರ ರಾಜ್ಯದಿಂದ ಬೆಂಗಳೂರಿಗೆ ಬಂದು ಕನ್ನಡ ಕಲಿಯುತ್ತಿರುವವರ ಒಂದು ಪ್ರಶ್ನೆ: ನಾವು ಇಲ್ಲಿ ಯಾರ ಜತೆ ಕನ್ನಡದಲ್ಲಿ ಮಾತನಾಡಬೇಕು?
- ಕಾಲ ಅನಂತವಾಗಿರುವಾಗ ಆತುರ ಏಕೆ?

**ಮೆಲುಕು ಹಾಕುವಂತಹ ಮಾತುಗಳ ಗುಚ್ಛ**

- ನಿಜವಾದ ಪ್ರಾರ್ಥನೆ ಎಂದರೆ ಮೌನ. ಉಳಿದವೆಲ್ಲ ಅದರ ಸವಕಲು ಅನುವಾದಗಳು.
- ಮಗು ರಚ್ಚೆ ಹಿಡಿದಾಗ ಸಮಾಧಾನಪಡಿಸುವ ನೀವು ಕೋಪಗೊಳ್ಳದೆ ಇರಬೇಕು.
- ಯು ಕೆನ್ ಓನ್ಲಿ ಬಿ ಯಂಗ್ ಒನ್ಸ್ ಬಟ್ ಯು ಕೆನ್ ಆಲ್ವೇಸ್ ಬಿ ಇಮ್ಮೇಚುರ್.
- ಓ! ಬಾಲ್ಯವೇ, ಒಮ್ಮೆ ಸಾಧ್ಯವಾದರೆ ಮರಳಿ ಬರುವೆಯಾ?
- ರೋಟಿ, ಕಪಡಾ, 3–ಬಿಎಚ್‌ಕೆ ಔರ್ ಫ್ರೀ ವೈಫೈ.
- ಆದರ್ಶಗಳಿಗೆ ಸಾವಿಲ್ಲ. ಅವು ಇನ್ನೊಬ್ಬನ ಖಾಲಿ ಹೆಗಲ ಮೇಲೇರಿ ಪಯಣ ಮುಂದುವರೆಸುತ್ತವೆ.
- ಯು ನೀಡ್ ನೊ ಒನ್ಸ್ ಪರ್ಮಿಷನ್ ಟು ಬಿ ಯುವರ್‌ಸೆಲ್ಫ್.
- ಯಾವುದೇ ವಾದದಲ್ಲಿ ದನಿ ಎತ್ತರಿಸಬೇಕಾಗಿ ಬಂದರೆ ನೀವು ಬಹುಶಃ ಸೋತಿರಿ ಎಂದರ್ಥ.
- ನೀವು ಕಲಿತಿದ್ದೆಲ್ಲಾ ಮರೆತ ಮೇಲೆ ನಿಮ್ಮಲ್ಲಿ ಉಳಿಯುವುದೇ ನಿಜವಾದ ವಿದ್ಯೆ.
- ನಾನು ಮಾತನಾಡುವುದು ಮೌನ, ಮೌನ ಮಾತ್ರ, ಮೌನ ಬಿಟ್ಟು ಬೇರೇನೂ ಅಲ್ಲ.
- ಮಾನವನಾಗಿ ಹುಟ್ಟಿದ ಮೇಲೆ ಏನೇನ್ ತಿಂತಿ?

# ನರಕದಲ್ಲಿ ರಾಜಕಾರಣಿಗಳು

**- ಎಚ್.ಜಿ. ಸೋಮಶೇಖರ ರಾವ್**

ಬ್ರಹ್ಮದೇವ ಬಹಳ ತುರ್ತುಸ್ಥಿತಿಗೆ ಸಿಕ್ಕು ಒಮ್ಮೆ ಕೇವಲ 3 ದಿನಗಳ 'ಕ್ಯಾಶುವಲ್ ಲೀವ್' ಹಾಕಿ ಎಲ್ಲೋ ಹೋಗಿದ್ದ. ಅವನ ಜಾಗದಲ್ಲಿ ಮತ್ತೊಬ್ಬನನ್ನು ಸೃಷ್ಟಿಕರ್ತನಾಗಿ ನೇಮಿಸಲಾಗಿತ್ತು; ಸೃಷ್ಟಿಕಾರ್ಯ ನಿರಂತರವಾಗಿ ನಡೆಯಲೇಬೇಕಲ್ಲ! ಬದಲಿಯಾಗಿ ಬರುವವರು ಇಲಾಖೆಯ ಮೂಲ ಮುಖ್ಯಸ್ಥನಷ್ಟೇ ಕೆಲಸದಲ್ಲಿ ನಿಪುಣರಾಗಿರುವುದಿಲ್ಲ.. 'ಅಲ್ಲಿ' ಏನು 'ಇಲ್ಲೂ' ಅದೇ ಹಣೆಬರಹ. ಕೆಳಗಿನ ಲೋಕದ ಆಡಳಿತ ಪ್ರಪಂಚದಲ್ಲಿ 'ಹಂಗಾಮಿ'ಯಾಗಿರುವವನು ಯಾವ ಮುಖ್ಯ ನಿರ್ಧಾರಗಳನ್ನೂ ತೆಗೆದುಕೊಳ್ಳದೆ ''ಸಾಹೇಬರು'' ಬರಬೇಕು ಅಂತ ಪೆಂಡಿಂಗ್ ಇಡಬಹುದು. ಆದರೆ ಅಲ್ಲಿ ಬ್ರಹ್ಮ ಲೋಕದಲ್ಲಿ ಅದು ಸಾಧ್ಯವಿಲ್ಲ. ಅದು ನಿರಂತರ ತಯಾರಿಕೆಯ 'ಕಾರ್ಖಾನೆ'ಯಾದ್ದರಿಂದ ಪೆಂಡಿಂಗ್ ಇಡಲು ಸಾಧ್ಯವಿಲ್ಲ. ಹೇಗೋ ನಿಭಾಯಿಸಬೇಕು. 'ಹಂಗಾಮಿ' ಸೃಷ್ಟಿಕರ್ತ ಸೃಷ್ಟಿಕಾರ್ಯದಲ್ಲಿ ಅನೇಕ ತಪ್ಪುಗಳನ್ನು ಮಾಡಿದ. ಬ್ರಹ್ಮ ರಜೆಯಿಂದ ಬಂದ ಕೂಡಲೇ ತನ್ನ 'ಡೆಪ್ಯುಟಿ'ಯನ್ನು ಕರೆದು... ''ಇದೇನಯ್ಯಾ'' ಲೆಕ್ಕ ತಪ್ಪಾಗಿದೆಯಲ್ಲ ಇಲ್ಲಿರುವ ಮೆದುಳಿನ ಸಂಖ್ಯೆಯೂ ನೀನು ಸೃಷ್ಟಿಮಾಡಿ ಕಳಿಸಿರುವ ವ್ಯಕ್ತಿಗಳ ಸಂಖ್ಯೆಯೂ ಸರಿಹೊಂದುತ್ತಿಲ್ಲವಲ್ಲ... ಕೆಲವರನ್ನು ''ಮೆದುಳು'' ಇಡದೆ ಸೃಷ್ಟಿಸಿ ಭೂಲೋಕಕ್ಕೆ ರವಾನಿಸಿಬಿಟ್ಟಿದ್ದೀಯಲ್ಲಾ...'' ಹಂಗಾಮಿಯವನು ''ಕ್ಷಮಿಸಿ ಪ್ರಭು.. ಏನೋ ತಪ್ಪಾಗಿ ಹೋಯ್ತು'' ದಯವಿಟ್ಟು ನನ್ನ ಮೇಲೆ ಯಾವ ಶಿಸ್ತಿನ ಕ್ರಮ ತೆಗೆದುಕೊಳ್ಳಬೇಡಿ. ನಾನು ನಿವೃತ್ತನಾಗಲು ಎಂಟು ತಿಂಗಳಿವೆ. 14 ಮಕ್ಕಳ ಸಂಸಾರ ಕಾಪಾಡಬೇಕು. ಬ್ರಹ್ಮನಿಗೆ 'ಪಾಪ' ಅನ್ನಿಸಿರಬೇಕು. ''ಹೋಗಲಿ ಬಿಡಯ್ಯ ತಲೆಕೆಡಿಸಿಕೊಳ್ಳಬೇಡ... ಭೂಲೋಕಕ್ಕೆ ಮೆದುಳಿಲ್ಲದೆ ಹೋಗಿರುವವರಿಗೂ ಅಲ್ಲಿ ಕೆಲಸವಿದೆ. ಅವರೆಲ್ಲಾ ರಾಜಕಾರಣಿಗಳಾಗುತ್ತಾರೆ'' ಎಂದ ಬ್ರಹ್ಮನ ಮಾತು ಸತ್ಯವಾಗಿ ಹೋಯಿತು!

ಇಂತಹ ಕೆಲವು ರಾಜಕಾರಣಿಗಳು ಸತ್ತು ನೇರ ನರಕಕ್ಕೆ ಹೋದರು. ಅವರೆಲ್ಲಾ ಗುಂಪು ಗೂಡಿ ಯಮನ ಹತ್ತಿರ ಹೋಗಿ ಪ್ರೊಟೆಸ್ಟ್ ಮಾಡಿ ಸ್ಲೋಗನ್ ಕೂಗಿದರು. ಯಮಧರ್ಮ ಸುಮ್ಮನಿದ್ದಾನೆಯೇ... ''ನೀವು ಭೂಲೋಕದಲ್ಲಿ ಮಾಡಿದ್ದನ್ನು ನನ್ನ ಮುಂದೆ ಮಾಡಿದರೆ ಈ ಆಟ ನಡೆಯೋಲ್ಲ'' ಅಂದದ್ದಕ್ಕೆ ಮುಖಂಡನೊಬ್ಬ ಮುಂದೆ ಬಂದು ''ಸ್ವಾಮಿ... ನಾವು ಲಕ್ಷಗಟ್ಟಲೆ ಜನರ ಸೇವೆ ಮಾಡಿದ್ದೀವಿ... ನಮ್ಮನ್ನೇಕೆ ನರಕಕ್ಕೆ ತಂದಿದ್ದೀರಿ... ನಾವು ಸ್ವರ್ಗಕ್ಕೆ ಹೋಗಬೇಕಾದವರು...'' ಅಂದಾಗ ಯಮ ಹೇಳಿದ... ''ನೀಮ್ಮ 'ಸೇವೆ'ಯ ಫಲ ಯಾರಿಗೆ ಮುಟ್ಟಿದೆ ಎಂಬುದು ನಮ್ಮ ಲೆಕ್ಕದಲ್ಲಿದೆ... ಈಗ ಬಾಯಿಮುಚ್ಚಿಕೊಂಡಿರಿ... ನಿಮ್ಮ ಸೇವೆಯ ಫಲವಾಗಿ ನಿಮಗಿಲ್ಲಿ ವಿಶೇಷವಾದ ಫಲ ಲಭಿಸಲಿದೆ...'' ಅಂತ ಅವರನ್ನೆಲ್ಲಾ ಒಂದು ಕತ್ತಲ ಕೋಣೆಗೆ ನೂಕಲಾಯಿತು. ಒಬ್ಬರ ಮುಖ ಇನ್ನೊಬ್ಬರಿಗೆ ಕಾಣುತ್ತಿಲ್ಲ... ಅದರ ಮಧ್ಯೆಯೇ ಒಬ್ಬ... ''ನಾವು ಸುಮ್ಮನೆ

ಇರಬಾರದು... ನಮ್ಮದೇ ಒಂದು ಪಾರ್ಟಿಕಟ್ಟಿ ಈ ಯಮನನ್ನ ಅವನ ಸೀಟಿನಿಂದ ಇಳಿಸಬೇಕು...'' ಎಂದು ಬೊಬ್ಬೆಹಾಕಲು ಶುರುಮಾಡಿದರು. ಆ ಅಬ್ಬರಕ್ಕೆ ಯಮನಿಗೂ ಹೆದರಿಕೆಯಾಯಿತು... ನನ್ನ ಕುರ್ಚಿಹೀನ ಮಾಡಿದರೆ ಏನುಗತಿ? ಎಂದು ಅವನ ಕೋಣನ ಮೇಲೆ ಕೂತು ಶೀಘ್ರವಾಗಿ ಬ್ರಹ್ಮನ ಹತ್ತಿರ ಹೋದ... ಗಾಬರಿಯಾಗಿ ಬೆವತು ಹೋಗಿದ್ದ ಯಮಧರ್ಮನನ್ನ ನೋಡಿದ ಬ್ರಹ್ಮ ''... ಏನಾಯಿತು? ಅದೇಕೆ ಇಷ್ಟೊಂದು ಗಾಬರಿ? ದೇವತೆಗಳಿಂದೇನಾದರೂ ಕಿರುಕುಳವೇ?'' ಮೇಲುಸಿರು ಬಿಡುತ್ತ ಯಮಧರ್ಮ... ''ಮಹಾಪ್ರಭು... ದೇವತೆಗಳನ್ನು ನಾನು ಎದುರಿಸಬಲ್ಲೆ ಆದರೆ ಈಗ ನನ್ನ ಲೋಕಕ್ಕೆ ಬಂದಿರುವ ಕೆಲವು ಮಾಜಿ ಮುಖ್ಯಮಂತ್ರಿಗಳು ರಾಜಕಾರಣಿಗಳಿಂದ ನನ್ನ ಸ್ಥಾನಕ್ಕೇ ಕಂಟಕ ಬಂದಿದೆ... ಅವರನ್ನ ನನ್ನ ಲೋಕಕ್ಕೆ ಕರೆದುಕೊಂಡು ಬಂದಿರೋದಕ್ಕೆ ಪ್ರತಿಭಟಿಸುತ್ತ ಯಮಲೋಕದಲ್ಲೆ ಪಾರ್ಟಿಕಟ್ಟಿ ನನ್ನ ಮೇಲೆ ಹೋರಾಟ ಮಾಡುವ ಹುನ್ನಾರ ನಡೆದಿದೆ. ಪ್ರಭು... ನಾನೀಗ ಏನು ಮಾಡಲಿ... ನನ್ನನ್ನು ನೀವೇ... ನನ್ನ ಹೈಕಮಾಂಡ್ ಆಗಿರುವ ತಾವು ಕಾಪಾಡಬೇಕು...'' ಎಂದು ಅಂಗಲಾಚಿದ ಬ್ರಹ್ಮ ಹೇಳಿದ: ''ಯಮಧರ್ಮ... ಹೆದರಬೇಡ... ಬಾ... ಕೂತುಕೋ... ಸುಧಾರಿಸಿಕೋ... ಏನಾದರೂ ತಣ್ಣಗಿನ ಪಾನೀಯ ತರಿಸಲೇ?'' '' ಏನೂ ಬೇಡ ಬ್ರಹ್ಮದೇವ... ನನ್ನ ಸಮಸ್ಯೆ...''

''ಹಾ... ಅವಸರಬೇಡ'' ಎಂದು ಫೋನಾಯಿಸಿ ಹೈಕಮಾಂಡಿನ ಇನ್ನಿಬ್ಬರು ಮುಖ್ಯರಾದ ವಿಷ್ಣು ಮತ್ತು ಮಹೇಶ್ವರರಿಗೆ ಬರಲು ಹೇಳಿದ ತ್ರಿಮೂರ್ತಿಗಳು ಸೇರಿದರು. ಏನೋ ಚರ್ಚೆಯಾಯಿತು... ತ್ರಿಮೂರ್ತಿಗಳು ಯಮನನ್ನು ಜೊತೆಯಾಗಿಸಿಕೊಂಡು ನರಕಕ್ಕೆ ಹೋದರು... ಅಯ್ಯೋ... ಜೊತೆಗಿದ್ದ ಬ್ರಹ್ಮನೇ ತಾನೂ ಸೇರಿದಂತೆ ತ್ರಿಮೂರ್ತಿಗಳಿಗೆ ನರಕದರ್ಶನದ ''ಭಾಗ್ಯದ ಗೆರೆ'' ಬರೆದಿದ್ದನೇನೋ!! ಅಲ್ಲಿ ಎ.ಸಿ. ವ್ಯವಸ್ಥೆಯಿಲ್ಲ ಸುಖಾಸೀನಗಳಿಲ್ಲ, ಎಲ್ಲೆಲ್ಲೂ ಕುಡಿದು ತಿಂದು ಬಿಸಾಕಿದ ಹೆಂಡದ ಖಾಲಿ ಬಾಟಲುಗಳು - ಮೂಳೆಗಳು'' ಗಬ್ಬುನಾಥದ ಮಾರ್ಗದಲ್ಲಿ ಮೂಗು ಮುಚ್ಚಿ ಕ್ರಮಿಸಿದ ತ್ರಿಮೂರ್ತಿಗಳು ಎ.ಸಿ ಇರುವ ಯಮನ ಕೇಬಿನ್ ತಲುಪಿ ನಿರಾಳತೆಯ ಉಸಿರಾಡಿದರು... ಯಮಲೋಕದ ವಿಶೇಷ ತಿಂಡಿ-ತೀರ್ಥಗಳು ಬಂದಿತಾದರೂ ನಿತ್ಯತೃಪ್ತರಾದ ತ್ರಿಮೂರ್ತಿಗಳು ಆ ಕಡೆ ನೋಡಲಿಲ್ಲ...

ಬ್ರಹ್ಮ ಯಮನಿಗೆ ಆದೇಶಿಸಿದ... ''ಹೋಗು... ಆ ಪಾಪಿಗಳನ್ನ ಸಾಲಾಗಿ ಕೂಡಿಸಿ ನಮ್ಮನ್ನು ಕರೆಸಿಕೋ... ಅವರನ್ನು ನಮಗೆ ಪರಿಚಯಿಸು...''

ಸರಿ... ವ್ಯವಸ್ಥೆಯಾಯಿತು. ತ್ರಿಮೂರ್ತಿಗಳು ತಾವೇ ಎದ್ದು ಆಸನಾ ರೂಢರಾಗಿದ್ದ ಮಾಜಿ ಮುಖ್ಯಮಂತ್ರಿಗಳು ರಾಜಕಾರಣಿಗಳಿದ್ದ ಕಡೆ ನಡೆದು ಬಂದರು. ಯಮಧರ್ಮ ಒಬ್ಬೊಬ್ಬರನ್ನೂ ಪರಿಚಯಿಸುತ್ತ ಚಿತ್ರಗುಪ್ತರಿಂದ ಅವರು ಮಾಡಿದ್ದ ಪಾತಕಗಳ ಪಟ್ಟಿಯನ್ನೋದಿಸಿದ... ಯಾರೂ ಕುರ್ಚಿ ಬಿಟ್ಟು ಏಳದೆ ಕುಂತಲ್ಲಿಂದಲೇ ಕೈ ಚಾಚಿ ತ್ರಿಮೂರ್ತಿಗಳ ಹಸ್ತಲಾಘವ ಮಾಡಿದರು... ತಮ್ಮ ಘನತೆ, ಸ್ಥಾನ-ಮಾನಗಳಿಗೆ

ತಕ್ಕುದಾದ ಮರ್ಯಾದೆಕೊಡದ ಪರಮಪಾತಕಿಗಳ ದುರಹಂಕಾರದಿಂದ ಬೇಸರಿಸಿಕೊಂಡ ತ್ರಿಮೂರ್ತಿಗಳು ''ಇವರಿಗೆ ಇಲ್ಲಿಗಿಂತ ಕೆಟ್ಟದ್ದಾದ ಘೋರ ನರಕವೊಂದನ್ನು ಸೃಷ್ಟಿಸಿ ಮತ್ಯಾರಿಗೂ ಲಭಿಸದ ಶಿಕ್ಷೆಗಳಿರುವ ಅಲ್ಲಿಗೆ ನೂಕಿಬಿಡು'' ಎಂಬ ಆಜ್ಞೆಮಾಡಿ ಅಲ್ಲಿಂದ ಹೊರಟುಬಿಟ್ಟರು...

ತ್ರಿಮೂರ್ತಿಗಳ ಆದೇಶವನ್ನು ಕೇಳಿದಕೂಡಲೇ ಪಾಪಿಗಳ ಗುಂಪಿನ ಬೊಬ್ಬಾಟ ಶುರುವಾಯಿತು... ತ್ರಿಮೂರ್ತಿಗಳಿಗೂ ಡೌನ್-ಡೌನ್ ಹೇಳಾಯಿತು... ಎದ್ದೆದ್ದು ಎದೆಬಡೆದುಕೊಂಡು ಗಂಟಲು ಹರಕೊಂಡಾಯಿತು... ಮುಂದೆ ತಾವು ರಚಿಸುವ 'ಸರ್ಕಾರ'ದ ಮೂಲಕ ನರಕವನ್ನು 'ನ್ಯಾಶನಲೈಸ್' ಮಾಡುವ ತೀರ್ಮಾನವಾಯಿತು... ರಿವಿಷನ್ ಆಫ್ ಪನಿಶ್‌ಮೆಂಟ್ ಬಗ್ಗೆ ತಿದ್ದುಪಡಿ ತಂದು ಕಾಯಿದೆಯನ್ನು ಬದಲಾಯಿಸಲು ಠರಾವಾಯಿತು...

ಈ ಎಲ್ಲಾ ಅಬ್ಬರದ ಮಧ್ಯೆ ತಬ್ಬಿಬ್ಬಾಗಿ ನಿಂತಿದ್ದ ಯಮಧರ್ಮ ಅವರೆಲ್ಲರ ಕೂಗಾಟಗಳನ್ನ ನಿಲ್ಲಿಸಿ ಎಂದು ಕೇಳಿಕೊಂಡ; ಗದ್ದಲದ ಮಧ್ಯೆ ಎದ್ದವನೊಬ್ಬ.. ''ರೀ... ಯಮಾ ಅವರೇ... ನಮ್ಮ ಅಹವಾಲನ್ನ ಮೇಲಿನವರಿಗೆ ಕಳಿಸಿ... ಏನೂ ಆಗದಿದ್ದರೆ ಏನ್ಮಾಡ್ಬೇಕೋ ನೋಡ್ತೀವಿ...'' ಅಂದ.

ಯಮಧರ್ಮನಿಗೆ ಏನು ತೋಚಿತೋ... 'ಅಲ್ಲಾ ಸ್ವಾಮಿ, ನಿಮ್ಮೆಲ್ಲ ಡಿಮಾಂಡ್ಸ್ ತ್ರಿಮೂರ್ತಿಗಳ ಮುಂದೆ ಹೇಳಿ ಪರಿಹಾರ ಪಡಿಬಹುದಾಗಿತ್ತು... ಅಲ್ರೀ... ಆ ಈ ರಾಜ್ಯಗಳಲ್ಲಿ ಇಡೀ ಜಗತ್ತನ್ನೇ ಆಳುವ ಪ್ರಭುಗಳ ಮುಂದೆ ಬಂದು ನಿಂತಾಗ ನೀವ್ಯಾರೂ ಎದ್ದು ನಿಂತು ಮರ್ಯಾದೆಯನ್ನೂ ಕೊಡಲಿಲ್ಲ... ಕೂತಲ್ಲಿಂದಲೇ ಕೈಚಾಚಿ ಅವರಿಗೆ ಅವಮಾನ ಮಾಡಿದ್ದೀರಿ... ಅದರಿಂದ ಅವರು ಸಿಟ್ಟಾದರು...'' ಅಂದಾಗ ''ರೀ, ಸ್ವಾಮಿ ಯಮಸ್ವಾಮಿ... ನಿಮಗೆ ರಾಜಕಾರಣ ಗೊತ್ತಿಲ್ಲ... ನಾವೆಲ್ಲಿದ್ದರೂ ಅಷ್ಟು ಸುಲಭವಾಗಿ 'ಸೀಟ್' ಬಿಟ್ಟು ಏಳಲ್ಲಪ್ಪಾ... ಅಂಥಾದ್ರಲ್ಲಿ ಇಲ್ಲಿ ನರಕದಲ್ಲಿ ಸಿಕ್ಕಿರೋ 'ಸೀಟ್' ಕಳಕೊಂಡ್ರೆ ನಮ್ಮ ಗತಿಯೇನು? ಎಲ್ಲಾದ್ರೇನು ಒಂದು ಕುರ್ಚಿ ಗಟ್ಟಿಯಾಗಿರಬೇಕು...''

ಈ ಮಾತು ಕೇಳಿದ ಕೂಡಲೇ ಯಮ ಅಲ್ಲಿಂದ ಓಡಿ ಹೋದ... ತನ್ನ ಕುರ್ಚಿ ಏನಾಗಿದೆಯೋ ಎಂದು!!! ನೋಡಲು.

✷

**ಇದೂ ಅದೇ**

ಜಾಮೆಟ್ರಿ ಮಾಸ್ತರರು ಎಲ್ಲ ಮಕ್ಕಳಿಗೂ ಒಂದು ಸರ್ಕಲ್ ರಚಿಸಲು ಹೇಳಿದರು. ಜಾಮೆಟ್ರಿ ಬಾಕ್ಸ್ ಯಾರ ಬಳಿಯೂ ಇರಲಿಲ್ಲವಾದ್ದರಿಂದ ಕೈವಾರವಿಲ್ಲದೆ ಅವರು ಸರ್ಕಲ್ ರಚಿಸಬೇಕಿತ್ತು. ಎಲ್ಲರೂ ತಮ್ಮ ತಮ್ಮ ತಲೆ ಉಪಯೋಗಿಸಿ ವೃತ್ತಾಕಾರದ ಆಕೃತಿಗಳನ್ನು ಹುಡುಕಿ ಅದರ ಸಹಾಯದಿಂದ ಸರ್ಕಲ್ ರಚಿಸತೊಡಗಿದರು. ಆದರೆ ಒಬ್ಬ ಹುಡುಗ ಮಾತ್ರ ಒಂದು ಚೌಕ ಬರೆದಿದ್ದ. ಚಕಿತಗೊಂಡ ಮಾಸ್ತರ್ ಇದೇನು? ಎಂದರು. ಇದು ಬಾಕ್ಸಿಂಗ್ ರಿಂಗ್ ಸರ್ ಎಂದ.

***(ಸಂಗ್ರಹ)***

# ಮುಖಪುಣ್ಯ

**- ಬೇಲೂರು ರಾಮಮೂರ್ತಿ**

**ನಂ**ಟು ಎನ್ನುವುದು ರಕ್ತದಲ್ಲಿ ಹರಿದು ಬಂದಿದ್ರೆ ಮಾತ್ರ ಅಲ್ಲ ಎನ್ನುವುದು ಅನೇಕರಿಗೆ ಅನುಭವಕ್ಕೆ ಬಂದಿದೆ. ಪರಸ್ಪರ ಪ್ರೀತಿ, ವಿಶ್ವಾಸ, ನಂಬಿಕೆ, ಸ್ವಾರ್ಥರಹಿತ ಸ್ಥಿತಿ ಇವುಗಳಿದ್ದರೆ ಒಳ್ಳೆಯ ಸಂಬಂಧ ಬೆಳೆದುಬಿಡುತ್ತದೆ. ನೂರಡಿ ರಸ್ತೆಯಲ್ಲಿರೋ ನೂರು ಅರವತ್ತು ಅಳತೆಯ ಬಂಗಲೆಯಲ್ಲಿರೋ ಅಯ್ಯನವರದೂ ಇದೇ ನಂಬಿಕೆ. ಈ ನಂಬಿಕೆಯಿಂದಲೇ ಅವರು ಪ್ರತೀ ದಿನ ಕಾರ್ಖಾನೆಗೆ ಹೊರಟರು ಎಂದರೆ ಎದುರುಗಡೆ ಒಂದು ಸಾರಿ ನೋಡುತ್ತಾರೆ. ಅವನು ಕಂಡರೆ ಸಾಕು ಅದೇನೋ ಸಮಾಧಾನ. ಎದುರುಗಡೆ ಇರೋ ಕೆಲವು ಸಣ್ಣ ಸಣ್ಣ ಮನೆಗಳ ನಡುವೆ ಗುಡಿಸಲಿನಂತಹ ಒಂದು ಮನೆಯಿದೆ. ಅವನಿರುವುದು ಅಲ್ಲೇ. ಏನೋ ವ್ಯಾಜ್ಯ ಇತ್ಯಾದಿ ಇರೋದ್ರಿಂದ ಎದುರುಗಿನ ಅನೇಕ ಸೈಟುಗಳ ಮಾಲೀಕರು ಅತ್ತ ಬಂದಿಲ್ಲ. ಅಯ್ಯನವರು ಮೊದಮೊದಲು ಇದೆಂಥ ಜನಾಪ್ಪ ಎದುರುಗಡೆ ಅಂದ್ಕೊಂತಾ ಇದ್ದೋರು ಬರ್ತಾ ಬರ್ತಾ ಅದೇ ಅನುಭವವಾಗಿಹೋಯಿತು. ಅದರಲ್ಲೂ ಅವನನ್ನು ಕಂಡರಂತೂ ಅದೇನೋ ಉಲ್ಲಾಸ. ಒಂದೊಂದು ದಿನ ಕಾರು ನಿಲ್ಲಿಸಿ ಲೇ ಬಾರೋ ತಗೋಳೋ ಅಂತ ನೂರು ರೂಪಾಯಿ ಕೊಟ್ಟುಬಿಡ್ತಾರೆ. ಅನೇಕ ಬಟ್ಟೆಗಳನ್ನು ಕೊಡ್ತಾರೆ. ಮನೆಗೆ ಬಂದಾಗ ಅವನಿಗೆ ಒಂದಿಷ್ಟು ಊಟ ಕೊಡು ಅಂತ ಹೆಂಡತಿಗೆ ಹೇಳ್ತಾರೆ. ದಿನಗಳೆದಂತೆ ಅಯ್ಯನವರಿಗೆ ಕಾರಲ್ಲಿ ಕೂತು ಹೊರಟರೆ ಅವನು ಕಾಣಲೇಬೇಕು ಅನ್ನೋ ಹಾಗಾಯ್ತು. ಆದರೆ ಅವನೊಂದಿಗೆ ಹೆಚ್ಚು ಮಾತಿಲ್ಲ, ಸಲಿಗೆಯಿಲ್ಲ. ಅವನನ್ನು ಮನೆಯ ಕಾಂಪೌಂಡಿನೊಳಕ್ಕೆ ಬಿಟ್ಟುಕೊಂಡಿಲ್ಲ. ಅವನ ಹೆಂಡ್ತಿನ ಮಕ್ಕಳನ್ನು ಮಾತಾಡಿಸಿಲ್ಲ. ದೂರದಲ್ಲೇ ಇಟ್ಟಿದಾರೆ.

ಇದು ಎಲ್ಲೀತನಕ ಹೋಯಿತು ಎಂದರೆ ಯಾವುದಾದರೂ ಹೊಸ ಕೆಲಸಕ್ಕೆ ಕೈ ಹಾಕಬೇಕು ಅನ್ನುವಾಗ ಅವನ ಮುಖ ನೋಡಲೇಬೇಕು ಅನ್ನೋ ಹಾಗಾಯ್ತು. ಕಾಕತಾಳೀಯವೋ ಏನೋ ಅವನ ಮುಖ ನೋಡಿಕೊಂಡು ಹೋದ ದಿನ ಎಲ್ಲ ಕೆಲಸಗಳೂ ಅಚ್ಚುಕಟ್ಟು, ತಾತನ ಕಾಲದಿಂದ ಉಳಿದಿದ್ದ ಕೆಲಸಗಳೂ ಮುಗಿದಿದ್ದವು. ಹೀಗಾಗಿ ಏನಾದರೂ ಹೊಸ ಕೆಲಸ ಪ್ರಾರಂಭ ಮಾಡಬೇಕು ಅಂದುಕೊಂಡ ದಿನ ಅವನ ಮುಖ ನೋಡಿಯೇ ಪ್ರಾರಂಭ ಮಾಡಬೇಕು ಅನ್ನೋ ಹಾಗಾಯ್ತು. ಆದರೆ ಅಯ್ಯನವರು ತಮ್ಮ ಈ ನಂಬಿಕೆಯನ್ನು ಯಾರಲ್ಲೂ ಹೇಳಿಕೊಂಡಿರಲಿಲ್ಲ.

ಅವರು ಒಂದು ದಿನ ಕಾರ್ಖಾನೆಯಿಂದ ಬರುವ ಹೊತ್ತಿಗೆ ಅವರ ಎದುರಿಗಿನ ಎಲ್ಲ ಮನೆಗಳನ್ನೂ ಗುಡಿಸಲುಗಳನ್ನೂ ನೆಲಸಮ ಮಾಡಿಬಿಟ್ಟಿದ್ದರು. ಸೈಟುಗಳ ಮಾಲೀಕರು ನ್ಯಾಯಾಲಯದಲ್ಲಿ ಕೇಸು ಗೆದ್ದಿದ್ದರಿಂದ ಅಲ್ಲಿದ್ದವರನ್ನೆಲ್ಲ ಎತ್ತಂಗಡಿ ಮಾಡಿಸಿಬಿಟ್ಟಿದ್ದರು. ಅಯ್ಯನವರಿಗೆ ಅವನು ಎಲ್ಲಿ ಹೋದ ಅನ್ನೋದೇ ಅರ್ಥವಾಗಲಿಲ್ಲ. ಅವನೂ ಅಯ್ಯನವರ ಮನೆ ಕಡೆ ಬರಲಿಲ್ಲ ಅವರ ಸಹಾಯ ಕೇಳಲಿಲ್ಲ.

ಕಣ್ಣಿಂದ ದೂರವಾದದ್ದು ಮನಸ್ಸಿನಿಂದಲೂ ದೂರ ಅನ್ನೋ ಒಂದು ಮಾತಿದೆ. ಅದರಂತೆ ಅಯ್ಯನವರಿಗೆ ಅವನೂ ಕ್ರಮೇಣ ಮರೀತಾ ಬಂದ. ಕೆಲವೇ ದಿನಗಳಲ್ಲಿ ಅವರು ಯಾವುದೋ ಸಾಂಸಾರಿಕ ತೊಂದರೇಲಿ ಸಿಕ್ಕಿಕೊಂಡರು. ಅವನಿದ್ದಿದ್ದರೆ ಅವನ ಮುಖ ಒಂದು ಸಾರಿ ನೋಡಿದ್ದರೆ ಸರಿಹೋಗಿರೋದು ಅನಿಸಿತ್ತು. ಇಂಥಾ ತೊಂದರೆಯಿಂದ ಮನೇಲಿ ಅವರ ಹೆಂಡತಿ, ಮಗ, ಮಗಳು ಎಲ್ಲ ನೊಂದಿದ್ದರು. ನ್ಯಾಯಾಲಯಕ್ಕೆ ಹೋಗಬೇಕು ಬಗೆಹರಿಸಿಕೊಳ್ಳಬೇಕು ಅನ್ನೋದೊಂದೇ ದಾರಿ ಇದ್ದದ್ದು. ನ್ಯಾಯಾಲಯಕ್ಕೆ ಹೋದರೆ ಅದೆಷ್ಟು ವರ್ಷ ಬೇಕೋ, ಅಲ್ಲೀವರೆಗೂ ಪ್ರತಿದಿನ ಅದು ಕೊರೀತನೇ ಇರುತ್ತೆ ಅನಿಸಿತು.

ಅದೊಂದು ದಿನ ಅಯ್ಯನವರು ಕಾರ್ಖಾನೆ ಕೆಲಸ ಮುಗಿಸಿ ಮನೆಗೆ ಹೊರಟಿದ್ದರು. ಕಂಟ್ರಾಕ್ಟರೊಬ್ಬನನ್ನು ನೋಡಬೇಕಿತ್ತು ಅನಿಸಿ ಡ್ರೈವರನಿಗೆ ಅತ್ತ ಕಡೆ ಹೋಗೋಕೆ ತಿಳಿಸಿದರು. ಕೆಲವಾರು ಕಿಲೋಮೀಟರು ಚಲಿಸಿರಬಹುದು, ಅಯ್ಯನವರು ಡ್ರೈವರನಿಗೆ ಕಾರು ನಿಲ್ಲಿಸು ಅಂದರು. ನಿಂತ ಕಾರಿನಿಂದ ಬೇಗ ಬೇಗ ಇಳಿದು ಸಣ್ಣ ಅಂಗಡಿಯತ್ತ ಹೋಗಿ ಪರಂಗಿ ಹಣ್ಣು ತಿನ್ನುತ್ತಿದ್ದವನನ್ನು ನೋಡಿ ನೀನು ಆ ಗುಡಿಸಲಿನಲ್ಲಿದ್ದೆ ಅಲ್ವಾ ಅಂತ ಕೇಳಿದರು. ಅಯ್ಯನವರನ್ನು ಗುರುತಿಸಿದ ಅವನು ಪರಂಗಿ ಹಣ್ಣು ಬಿಸಾಕಿ ಕೈನ ಷರಟಿಗೆ ಒರೆಸಿಕೊಂಡು ನಮಸ್ಕರಿಸಿ ಅವರ ಕಾಲಿಗೆ ಬಿದ್ದು ಹೌದು ಬುದ್ಧಿ ಏನು ಮಾಡೋದು ಬಡವರಾಗಿ ಹುಟ್ಟೋದೇ ಮಹಾ ಪಾಪ ಅಂದ.

ಮೊಬೈಲ್ ರಿಂಗಾಯಿತು ಮಗಳು ಫೋನ್ ಮಾಡುತ್ತಿದ್ದಳು ಅಣ್ಣಾ ಅವರು ಮನೆಗೆ ಬಂದಿದ್ದರು ಕೇಸ್ ಹಾಕೋಲ್ವಂತೆ ಮಾತಾಡಿ ಬಗೆಹರಿಸಿಕೊಳ್ಳೋಣ ನಿಮ್ಮ ತಂದೆ ಎಷ್ಟು ಹೊತ್ತಿಗೆ ಸಿಕ್ತಾರೆ ಅಂತ ಕೇಳಿದರು. ಇನ್ನೇನೂ ಆತಂಕ ಇಲ್ಲ ಅಣ್ಣಾ ಅಂದಳು. ಅಯ್ಯನವರ ಕಣ್ಣಲ್ಲಿ ನೀರು ಬಂತು.

ಜೋಬಿಂದ ತಮ್ಮ ಕಾರ್ಡ್ ಕೊಟ್ಟು ಅವನಿಗೆ ಹೇಳಿದರು. ಯಾರನ್ನಾದರೂ ಕೇಳಿಕೊಂಡು ಈ ವಿಳಾಸಕ್ಕೆ ನಾಳೆ ಹತ್ತು ಗಂಟೆಗೆ ಬಾ. ನಿನಗೆ ಒಂದು ಕೆಲಸ, ನಿನ್ನ ಕುಟುಂಬಕ್ಕೆ ನಮ್ಮ ಕಾರ್ಖಾನೆ ನೌಕರರ ವಸತಿಗೃಹದಲ್ಲಿ ಒಂದು ಮನೆ ಕೊಡ್ತೀನಿ. ಬರೋದು ಮರೀಬೇಡ ಅಂತ ಹೇಳಿ ಹೊರಟರು. ಅಯ್ಯನವರಿಗೆ ಅವತ್ತು ಆದ ಸಮಾಧಾನಕ್ಕೆ ಪರ್ಯಾಯವೇ ಇಲ್ಲ. ಆದರೆ ಅವನು ಮಾತ್ರ ಇವರ್ಯಾರು, ನನ್ನನ್ನು ಇಲ್ಲೀವರೆಗೂ ಯಾಕೆ ಹುಡುಕಿಕೊಂಡು ಬಂದರು, ನನಗೇಕೆ ಕೆಲಸ ಕೊಡ್ತೀನಿ, ಮನೆ ಕೊಡ್ತೀನಿ ಅಂದ್ರು ಅಂತ ಅರ್ಥ ಆಗಲೇ ಇಲ್ಲ.

ಯಾರಿಗೆ ಯಾರೂ ಇಲ್ವೋ ಅವರಿಗೆ ಅವನಿದ್ದಾನೆ, ಆ ಅವನು ಅನ್ನೋನು ಇಂಥವರ ಮುಖಾಂತರ ಕಾಣಿಸಿಕೊಳ್ತಾನೆ ಅಂತ ಯಾರೋ ಎಂದೋ ಹೇಳಿದ್ದು ಆಗ ಅವನಿಗೆ ಥಟ್ಟನೆ ನೆನಪಾಯಿತು. ಖುಷಿ ಸಂಗತಿಯನ್ನು ಹೆಂಡತಿಗೂ ಮಕ್ಕಳಿಗೂ ಹೇಳೋಣ ಅಂತ ಮೋರಿ ಪಕ್ಕದ ಸಣ್ಣ ಝೋಪಡಿಗೆ ಓಡಿದ.

✷

# ಸ್ವಚ್ಛೇ ದಿನ್ ಆಯೇ ಹೈ..

**- ವೈ.ವಿ. ಗುಂಡೂರಾವ್**

**ಒಂ**ದು ಓಟದ ಸ್ಪರ್ಧೆ. ಅತಿ ದಪ್ಪನೆ ಮಹಿಳೆಯೊಬ್ಬಳಿಗೆ ಪ್ರಥಮ ಬಹುಮಾನ ಬಂತು. ಬಹುಮಾನ ಪಡೆಯೋದಕ್ಕೆ ಅವಳು ಹೋದಾಗ, ಪ್ರೇಕ್ಷಕರಲ್ಲಿ ಕುಳಿತಿದ್ದವರಲ್ಲಿ ಒಬ್ಬ 'ಇವಳೊಬ್ಬಳೇ ಇರಬೇಕು ಓಡಿದ್ದು' ಎಂದು ಪ್ರತಿಕ್ರಿಯಿಸಿದ. ಆಗ ಇನ್ನೊಬ್ಬ 'ಇಲ್ಲ, ಇಲ್ಲ, ಇದ್ದರಂತೆ ಸುಮಾರು 27-28 ಜನರು. ಆದರೆ ಪ್ರಥಮ ಬಹುಮಾನ ಬಂದದ್ದು ಇವಳಿಗೆ' ಎಂದು ಉತ್ತರಿಸಿದ. ಆಗ ಮಗದೊಬ್ಬ 'ಪ್ರಥಮ ಬಹುಮಾನ ಪಡೆದವಳೇ ಇಷ್ಟು ದಪ್ಪ ಇರಬೇಕಾದರೆ, ಮಿಕ್ಕವರು ಇನ್ನು ಹೇಗೆ ಇದ್ದಿರಬಹುದು, ಊಹಿಸಿ...' ಎಂದು ಕೇಳಿದ.

**ಬೆಂಗಳೂರೇ ಅತಿ ಸ್ವಚ್ಛ ಎಂದರೆ ಉಳಿದ ನಗರಗಳ ಪಾಡೇನು?**

ಇದು ನೆನಪಿಸಿಕೊಂಡಾಗ ನನಗೆ ಇಂಗ್ಲಿಷಿನ ಒಂದು ಉಕ್ತಿ ನೆನಪಾಗುತ್ತದೆ - ನಾಟ್ ದಟ್ ವಿ ಆರ್ ಗುಡ್. ಬಟ್ ಅದರ್ಸ್ ಆರ್ ಬ್ಯಾಡ್. ಗಾದೆ ಕೇಳಿದ್ದೀರಲ್ಲವಾ? ಹಾಳೂರಿಗೆ ಉಳಿದವನೇ ಗೌಡ, ಕುರುಡು ಕಣ್ಣಿಗಿಂತ ಮೆಳ್ಳಗಣ್ಣು ಮೇಲು!!

ಆದರೆ ಇದೆಲ್ಲಾ ಈಗ್ಯಾಕೆ? ಯಾವುದಕ್ಕೆ ಈ ಪೀಠಿಕೆ ಮತ್ತು ಟೀಕೆ?

ನಮ್ಮ ದೇಶದ ರಾಜಧಾನಿಗಳಲ್ಲೆಲ್ಲಾ ನಮ್ಮ ಹೆಮ್ಮೆಯ ಕರ್ನಾಟಕದ ರಾಜಧಾನಿ ಬೆಂಗಳೂರಿಗೆ ಸ್ವಚ್ಛ ರಾಜಧಾನಿ ಎಂಬ ಪ್ರಶಸ್ತಿ ಬಂತಲ್ಲ ಅದಕ್ಕೆ ನೆನಪಾಯಿತು ಇವೆಲ್ಲ!

ಈ ಸುದ್ದಿಯಿಂದ ಖುಷಿ ಪಡೋದು ಬಿಟ್ಟು ವ್ಯಂಗ್ಯ ಮಾಡ್ತಾ ಇದ್ದೀನಲ್ಲಾ ಅಂತ ನಿಮಗೆ ನನ್ನ ಮೇಲೆ ಸಿಟ್ಟೋ ಬೇಜಾರೋ ಆಗಿರಬಹುದು. ನೆಗೆಟಿವ್ ಥಿಂಕರ್ ಅಂತ ನೀವು ನನ್ನನ್ನು ಬ್ರಾಂಡ್ ಮಾಡಬಹುದು. ಸಿನಿಕ ಅಂತ ಕರೀಬಹುದು. ಆದರೆ ಸ್ವಲ್ಪ ನಿಷ್ಪಕ್ಷಪಾತವಾಗಿ ಆಲೋಚಿಸಿ... ನಾನು ಹೇಳಿದ್ದರಲ್ಲಿ ಏನಾದರೂ ತಪ್ಪಿದೆಯಾ? ನೀವು ಇಡೀ ಭಾರತ ನೋಡಿರಬಹುದು ಅಥವಾ ಹಲವಾರು ರಾಜಧಾನಿಗಳಿಗೆ ಭೇಟಿ ಕೊಟ್ಟಿರಬಹುದು. ಭೇಟಿಯೇ ಆಗಬೇಕಾದದ್ದೇನೂ ಇಲ್ಲ, ಸಿನೆಮಾಗಳಲ್ಲೋ ಇಂಟರ್‌ನೆಟ್‌ನಲ್ಲೋ ನೋಡಿರಬಹುದು. ಬೆಂಗಳೂರನ್ನ ಇತರೆ ರಾಜ್ಯಗಳ ರಾಜಧಾನಿಗಳೊಂದಿಗೆ ಹೋಲಿಸಿ ನೋಡಿ. ನಾಟ್ ದಟ್ ವಿ ಆರ್ ಗುಡ್. ಬಟ್ ಅದರ್ಸ್ ಆರ್ ಬ್ಯಾಡ್ ಅಂತ ನಾನಂದದ್ದು ತಪ್ಪಾ? ಏನು ಸಾರ್! ಪ್ರಥಮ ಬಹುಮಾನ ಪಡೆದವರೇ ಇಷ್ಟು ದಪ್ಪ ಇರಬೇಕಾದರೆ, ಮಿಕ್ಕವರು ಇನ್ನು ಹೇಗೆ ಇದ್ದಿರಬಹುದು ಅಂದದ್ದರಲ್ಲಿ ದೋಷ ಇದೆಯಾ? ಹಾಳೂರಿಗೆ ಉಳಿದವನೇ ಗೌಡ ಅಂದರೆ ಮಹಾಪರಾಧನಾ? ಕುರುಡು ಕಣ್ಣಿಗಿಂತ ಮೆಳ್ಳಗಣ್ಣು ಮೇಲು ಅಂದರೆ ಸರಿ ಅಲ್ಲವಾ? ಹವಾ ಮಾಲಿನ್ಯ, ಜಲ ಮಾಲಿನ್ಯ, ಶಬ್ದ ಮಾಲಿನ್ಯ ಮುಂತಾದ ಮಾಲಿನ್ಯಗಳಲ್ಲಿ

ಬೆಂಗಳೂರು ಮುಂಚೂಣಿಯಲ್ಲಿದೆ ಎಂಬ ಎಷ್ಟು ವರದಿಗಳನ್ನು ನಾವೇ ಓದಿಲ್ಲ, ಕೇಳಿಲ್ಲ! ಅದರ ಕುರಿತು ನಾವೇ ಎಷ್ಟು ಸಾರಿ ಮಾತಾಡಿಕೊಂಡಿಲ್ಲ!

ಖುಷಿ ಪಡೋಣ. ತಪ್ಪೇನಿಲ್ಲ. ಸಂಭ್ರಮಿಸೋಣ. ಅದೂ ಸರೀನೇ. ಬೆಂಗಳೂರು ಅನೇಕ ವಿಷಯಗಳಲ್ಲಿ ಸ್ವರ್ಗ. ಇಲ್ಲಿನ ಜನಗಳ ಪ್ರೀತಿ, ಏ.ಸಿ. ಹವಾಮಾನ, ಹೆಚ್ಚು ಹಸಿರು, ಉದ್ಯೋಗಾವಕಾಶ, ಶಿಕ್ಷಣದ ಮಟ್ಟ, ಶಾಂತಿಪ್ರಿಯತೆ. ಇನ್ನೂ ಅನೇಕ, ಇಲ್ಲಿನವರು ಹೆಮ್ಮೆಪಡುವ ಮತ್ತು ಇತರರು ಹೊಟ್ಟೆ ಕಿಚ್ಚು ಪಡಬೇಕಾದ ಅಂಶಗಳು. ನಿಮಗೊಂದು ಘಟನೆ ಹೇಳಬೇಕು. ನಾನು ಒಂದು ಕೇಂದ್ರ ಸರ್ಕಾರ ಸ್ವಾಮ್ಯದ ಬ್ಯಾಂಕಿನ ಉದ್ಯೋಗಿಯಾಗಿದ್ದೆ. ಇಡೀ ಭಾರತದಿಂದ ವರ್ಗಾವಣೆಯಾಗಿ ಇಲ್ಲಿಗೆ ಅಧಿಕಾರಿಗಳು ಬಂದು ಹೋಗುತ್ತಿರುತ್ತಾರೆ. ಅವರೆಲ್ಲರಲ್ಲಿ ಬಹುಪಾಲು ಜನರು ಮಾಡುತ್ತಿದ್ದುದು ಏನು ಗೊತ್ತಾ? ಮತ್ತೆ ಬೇರೆ ಕಡೆ, ಅಥವಾ ತಮ್ಮ ಊರಿಗೆ ವರ್ಗವಾಗಿ ಹೋಗುವುದರೊಳಗೆ ಬೆಂಗಳೂರಿನಲ್ಲಿ ಒಂದು ಸೈಟೋ, ಫ್ಲಾಟೋ ಕೊಂಡುಕೊಂಡು, ಬಾಡಿಗೆಗೆ ಕೊಟ್ಟು, ನಿವೃತ್ತಿಯಾದ ನಂತರ ಇಲ್ಲೇ ಠಿಕಾಣಿ ಹಾಕುವ 'ಸ್ಕೆಚ್' ಹಾಕೋದು. ಅವರೆಲ್ಲರೂ ಹಾಡುವ ಕನ್ನಡ ಗೀತೆ ಯಾವುದು ಗೊತ್ತೇ?! *'ಹುಟ್ಟಿದರೇ ಕನ್ನಡ ನಾಡಲ್ ಹುಟ್ಟಬೇಕು... ಹುಟ್ಟದಿದ್ರೆ, ಕನ್ನಡ ನಾಡಲ್ ಸೆಟ್ಲ್ ಆಗಬೇಕು.'*

ಸ್ವಚ್ಛತೆ ಅನ್ನುವುದು ಕೇವಲ ಊರು, ಕೇರಿ, ಪರಿಸರಕ್ಕೆ ಮಾತ್ರ ಅನ್ವಯಿಸುವುದಿಲ್ಲ. ಆಂತರಿಕ ಮತ್ತು ಬಾಹ್ಯ ಎರಡಕ್ಕೂ ಅನ್ವಯ. ಅಂತರಂಗ ಶುದ್ಧಿ, ಬಹಿರಂಗ ಶುದ್ಧಿ ಅನ್ನಲಿಲ್ಲವೇ ಬಸವಣ್ಣನವರು? ನಾವೆಲ್ಲರೂ ಮೂರು ಕ್ಷೇತ್ರಗಳಲ್ಲಿ ಅಂದರೆ, ಮೂರು ''ಸ''ಕಾರಗಳಲ್ಲಿ ಜೀವಿಸುತ್ತಿರುತ್ತೇವೆ. ಅವೇ ''ಸಂಸಾರ, ಸಂಸ್ಥೆ ಮತ್ತು ಸಮಾಜ.'' ಈ ಮೂರು ಬಿಟ್ಟರೆ ಇನ್ನೇನಾದರೂ ಇದೆಯಾ? ('ಮೂರೂ' ಬಿಟ್ಟರೆ ಇನ್ನೇನಿದೆ ಅಂತೀರೇನೋ!!) ಈ ಮೂರೂ ಕ್ಷೇತ್ರಗಳಲ್ಲಿ ಇವತ್ತು ಶಾಂತಿ, ಸಮಾಧಾನ, ನೆಮ್ಮದಿ ಇಲ್ಲ. ಕಾರಣ ಸ್ಥಳೀಯರು ಮತ್ತು ಪರಕೀಯರು. ಅತೀ ವಿಶಾಲ ಮನೋಭಾವದ ಬೆಂಗಳೂರಿಗರಾದ ನಾವುಗಳು ಎಲ್ಲರಿಗೂ ಅವಕಾಶ ಮಾಡಿಕೊಟ್ಟು, ಅಂತರಂಗ ಮತ್ತು ಬಹಿರಂಗದಲ್ಲಿ ಶಾಂತಿಯನ್ನು ಕಳೆದುಕೊಳ್ಳುತ್ತಿದ್ದೇವೆ. ಒಂದು ಕೆನ್ನೆಗೆ ಹೊಡೆದರೆ, ಇನ್ನೊಂದು ಕೆನ್ನೆ ಕೊಡೋದಿರಲಿ, ಇಡೀ ದೇಹವನ್ನೇ ಕೊಟ್ಟು ಹೊಡಿಸಿಕೊಳ್ಳುತ್ತಿದ್ದಾನೆ ಇಂದಿನ ಬೆಂಗಳೂರಿಗ ಈ ಮೂರೂ ಕ್ಷೇತ್ರಗಳಲ್ಲಿ...

ಕೈಲಾಸಂ ಇರುತ್ತಿದ್ದ ಕೋಣೆ ಸದಾ ಅತೀ ಗಲೀಜಿನಿಂದ ಕೂಡಿರುತ್ತಿತ್ತಂತೆ. ಒಬ್ಬರು ಬಂದು ಏನು ಸಾರ್! ರೂಮು ಇಷ್ಟು ಡರ್ಟಿ ಆಗಿದೆ, ಅಂದಾಗ ಕೈಲಾಸಂ ಕಸ ಅಂದರೆ ಏನು ಗೊತ್ತೇ ನಿಮಗೆ? ಎನಿಥಿಂಗ್ ಔಟ್ ಆಫ್ ಪ್ಲೇಸ್ ಈಸ್ ಡರ್ಟಿ. ಫಾರ್ ಎಕ್ಸಾಂಪಲ್, ಯು ಇನ್ ದಿಸ್ ಹೌಸ್ ಅಂದರಂತೆ. ಪ್ರಸ್ತುತ ಸನ್ನಿವೇಶದಲ್ಲಿ ಈ ಮಾತಿಗೆ ವಿಶೇಷಾರ್ಥವಿರುವುದನ್ನು ಪ್ರಾಜ್ಞರಾದ ನೀವು ಖಂಡಿತ ಗಮನಿಸುತ್ತೀರ ಎನ್ನುವುದರಲ್ಲಿ ನನಗೆ ಎಳ್ಳಷ್ಟೂ, ಸಾಸಿವೆಯಷ್ಟೂ, ರವೆಯಷ್ಟೂ, ರಾಗಿಕಾಳಿನಷ್ಟೂ ಅನುಮಾನವಿಲ್ಲ.

ಈಗ ನಮಗೆ ಬೇಕಾಗಿರುವುದು ಅಂತರಂಗ ಶುಚಿತ್ವ. ಹೊರ ನೋಟಕ್ಕೆ

ನೀಟಾಗಿರುವುದು ಎಷ್ಟು ಮುಖ್ಯವೋ, ಒಳಗಿನ ಪ್ರೀತಿ, ವಿಶ್ವಾಸ, ನಂಬಿಕೆ, ಪರಸ್ಪರ ಹೊಂದಾಣಿಕೆ ಇವೂ ಅಂತರಂಗದ ಸ್ವಚ್ಛತೆಯ ಭಾಗವಲ್ಲವೇ? ಇದರ ಸ್ವಚ್ಛತೆ ಅಗತ್ಯವಲ್ಲವೇ? ಇದಕ್ಕೆ ಎಲ್ಲಿದೆ ಸ್ಪರ್ಧೆ? ಇದಕ್ಕೆ ಬಹುಮಾನ ಕೊಡುವವರು ಯಾರು? ಹೊರಗಿನವರು ಬಿಡಿ. ನಮ್ಮನಮ್ಮವರೇ ನಮ್ಮನಮ್ಮಲ್ಲಿ ಎಷ್ಟೋ ವಿಷಯಗಳಲ್ಲಿ ವಿಷ ಬಿತ್ತುತ್ತಿಲ್ಲವೇ ಜಾತಿ ಹೆಸರಿನಲ್ಲಿ, ಪೊಳ್ಳು ವಿಚಾರವಾದದ ಹೆಸರಿನಲ್ಲಿ, ಒಳ್ಳೆ ಮೌಲ್ಯಗಳನ್ನೆಲ್ಲಾ ಧಿಕ್ಕರಿಸುವ ವಿಷಯದಲ್ಲಿ, ಐಷಾರಾಮಿ ಬದುಕಿನ ಹೆಸರಿನಲ್ಲಿ, ನಾವು ನಾವು ಆರಾಮವಾಗಿರಬೇಕು ಎನ್ನುವ ಗಲಾಟೆಯಲ್ಲಿ, ಭರಾಟೆಯಲ್ಲಿ, ಸ್ವಾರ್ಥದಿಂದ ಹೆತ್ತವರನ್ನು, ಒಡಹುಟ್ಟಿದವರನ್ನು ದೂರಮಾಡಿ, ಒಂಟಿಯಾಗಿ ಬದುಕುವ ವಿಚಾರದಲ್ಲಿ!!! ಇವೆಲ್ಲಾ ಆಂತರಿಕ ಸ್ವಚ್ಛತೆಯೊಳಗೆ ಬರುವುದಿಲ್ಲವೇ? ಸ್ವಚ್ಛತೆಗೆ ಗಮನಕೊಡುವವರು ಈ ವಿಷಯಗಳಿಗೆಲ್ಲಾ ಗಮನಕೊಡಲು ಬರುವುದಿಲ್ಲ. ಯಾಕೆಂದರೆ ಇವೆಲ್ಲಾ ಅವರ ಪರಿಧಿಗೆ ಬರುವ ವಿಷಯಗಳಲ್ಲ. ಇವೆಲ್ಲಾ ನಾವೇ ಆಲೋಚಿಸಬೇಕಾದ ಸಂಗತಿಗಳು. ಅಂತರಂಗ ಸ್ವಚ್ಛವಾಗಿದ್ದಾಗ ಮಾತ್ರ ಬಹಿರಂಗ ಸ್ವಚ್ಛತೆಗೆ ಅರ್ಥ ಬರುತ್ತದೆ. ಇಲ್ಲದಿದ್ದರೆ, ಕಾರ್ಪೆಟ್ ಕ್ಲೀನ್ ಮಾಡಿ, ಅದರ ಮೇಲಿನ ಕಸವನ್ನೆಲ್ಲಾ ಕಾರ್ಪೆಟ್ ಕೆಳಗೆ ತಳ್ಳಿಬಿಟ್ಟರೆ, ಮೇಲೆ ಕಾರ್ಪೆಟ್ ಸ್ವಚ್ಛವಾಗಿ ಕಾಣಿಸಬಹುದು. ಆದರೆ ಕೆಳಗೆ? ಒಳಗೆ? ಅದು ಮುಖ್ಯವಲ್ಲವಾ? ಅಥವಾ ಅದೇ ಮುಖ್ಯವಲ್ಲವಾ?

ನನಗೊತ್ತು, ನೀವೇನು ಯೋಚನೆ ಮಾಡ್ತಾ ಇದ್ದೀರಾಂತ... ಈ ವಿಚಾರಗಳು ಎಲ್ಲರಿಗೂ ಅನ್ವಯಿಸುತ್ತವೆ, ಬೆಂಗಳೂರಿಗೆ ಮಾತ್ರ ಅಲ್ಲ, ವಿಷಯಾಂತರ ಮಾಡ್ತಾ ಇದ್ದೀನಂತ, ನಿಮಗೆ ಅನ್ನಿಸುತ್ತಿರಬಹುದು. ಈಗ ನಮ್ಮ ಬಾಹ್ಯ ಸ್ವಚ್ಛತೆಗೆ ಗರಿ ಮೂಡಿರುವುದರಿಂದ ಮತ್ತು ಬೆಂಗಳೂರಿಗರ ಗುಣವಿಶೇಷಗಳು ವಿಶ್ವದ ಗಮನವನ್ನೂ ಸೆಳೆದಿರುವುದರಿಂದ ಆಂತರಿಕ ಸ್ವಚ್ಛತೆ ಹೆಚ್ಚು ಮುಖ್ಯ ಅಂದೆ ಅಷ್ಟೆ, ತಪ್ಪು ತಿಳಿಯಬೇಡಿ.

**ಕೊನೇ ಮಾತು-** ಮಾಸ್ಟರ್ ಹಿರಣ್ಣಯ್ಯನವರಿಗೆ ಒಂದು ಸಾರಿ ಒಂದು ಸಂಸ್ಥೆಯವರು ನಿಮಗೆ ಸನ್ಮಾನ ಮಾಡ್ತೀವಿ, ಒಪ್ಪಿಕೊಳ್ಳಿ ಅಂದರಂತೆ. ಸನ್ಮಾನ ಸ್ವೀಕರಿಸಬೇಕೋ ಬೇಡವೋ ಎನ್ನುವ ದ್ವಂದ್ವದಲ್ಲಿದ್ದಾಗ, ಹಿರಿಯ ಸಾಹಿತಿಯೊಬ್ಬರು ಹೇಳಿದರಂತೆ – 'ಸ್ವೀಕರಿಸಿ, ತಪ್ಪೇನಿಲ್ಲ, ನೀವು ಒಳ್ಳೆ ಕೆಲಸ ಮಾಡಿದ್ದರೆ ಈ ಸನ್ಮಾನ ಅದಕ್ಕೆ ರಸೀತಿ ಇದ್ದ ಹಾಗೆ. ಇನ್ನೂ ಮಾಡಬೇಕಾದದ್ದು ಇದ್ದರೆ, ಈ ಸನ್ಮಾನ ಅದಕ್ಕೆ ಅಡ್ವಾನ್ಸ್ ಇದ್ದ ಹಾಗೆ.' ಈಗ ನಮ್ಮ ಊರಿಗೆ ಬಂದಿರುವ ಈ ಪ್ರಶಸ್ತಿಯನ್ನೂ ನಾವು ಅದೇ ಭಾವನೆಯಿಂದ ಅಂದರೆ, ಮಾಡಿದ್ದಕ್ಕೆ ರಸೀತಿ, ಮಾಡಬೇಕಾದದ್ದಕ್ಕೆ ಮುಂಗಡ ಅಂದುಕೊಂಡರೆ ನಿಜಕ್ಕೂ ಬೆಂಗಳೂರು ವಿಶ್ವ ಮಟ್ಟದಲ್ಲಿ ಸ್ವಚ್ಛ ನಗರವಾಗುವುದರಲ್ಲಿ ಸಂಶಯವಿಲ್ಲ ಅನ್ನುವ ಮಾತನ್ನು ನೀವೆಲ್ಲರೂ ಒಪ್ಪುತ್ತೀರಿ ಎನ್ನುವ ನಂಬಿಕೆ, ನನ್ನದು.

**ನಿಜಕ್ಕೂ ಕೊನೇ ಮಾತು-** ಸಿಟಿಜನ್ ಸ್ವಚ್ಛವಾಗಿದ್ದರೆ (ಅಂತರಂಗ ಮತ್ತು ಬಹಿರಂಗದಲ್ಲಿ) ಸಿಟಿ ಸ್ವಚ್ಛವಾಗಿರುತ್ತದೆ, ಅಲ್ಲವೇ?

✴

# ವಾಟ್ರೋಲ್

## (ಅನರ್ಥಾತ್ ತೊಟ್ಟಿ ಐಡಿಯಾ)

**- ಶ್ರೀಕಂಠ ಗುಂಡಪ್ಪ**

**ಮೊ**ನ್ನೆ 6ನೇ ಬಾರಿ ಪೆಟ್ರೋಲ್ ಬೆಲೆ ಏರಿಸಿದಾಗ ನನ್ನ ಬಿಪಿ ಕೂಡ ಏರಿತು. ಮಾತ್ರೆ ತೆಗೆದುಕೊಂಡು ನಾರ್ಮಲ್ ಆದಮೇಲೆ ಈ ತೊಟ್ಟಿ ಐಡಿಯಾ ಹೊಳೆಯಿತು. ಹಾಳಾದ ಪೆಟ್ರೋಲ್‌ಗೆ ಬದಲು ಪರ್ಯಾಯವಾಗಿ ಉಪಯೋಗಿಸಬಹುದಾದ ಇಂಧನ ಅಂದ್ರೆ ವಾಟ್ರೋಲ್. ಈ ವಿಷಯ ತಿಳಿದಿದ್ದು ಇಸ್ವನಿಂದ.

'ತಣ್ಣೀ ಕೊಡಿ, ತಣ್ಣೀ ಕೊಡಿ ಅಂತ ತಮಿಳುನಾಡು ಕರ್ನಾಟಕವನ್ನ ಏಕೆ ಹೀಗೆ ಒತ್ತಾಯಿಸುತ್ತಿದೆ ಗೊತ್ತಾ!' ಇಸ್ವ ಉರೂಫ್ ಇಸ್ವನಾದ ಯಾ ವಿಶ್ವನಾಥ – ಬೆಳ್ಳಂಬೆಳಗ್ಗೆ ನನ್ನ ಮೇಲೆ ಪ್ರಶ್ನೆ ಎಸೆದ.

'ಯಾಕೆ?' ಅಂತ ಕೇಳಿದೆ.

'ನೀನು ಮನೆಗೆ ನ್ಯೂಸ್‌ಪೇಪರ್ ತರಿಸೋದು ದಂಡಕ್ಕೆ' – ಅಂತ ಹಿಗ್ಗಾಮುಗ್ಗ ಬೈದ. (ಆಪ್ತಮಿತ್ರರ ಸಲಿಗೆ ಅಂದ್ರೆ ಹಾಗೇ ಮತ್ತೆ)

'ವಿಷಯ ಏನು ಬೊಗಳು' ಅಂದೆ.

'ನೋಡಯ್ಯಾ, ಇನ್ನು ಮೇಲೆ ಡ್ರಮ್ಮುಗಟ್ಟಲೆ ನೀರು ಸ್ಟಾಕು ಮಾಡಿಡು' – ಸಲಹೆ ನೀಡಿದ.

'ಅಲ್ಲಯ್ಯಾ, ಎರಡು ದಿನಕ್ಕೆ ಒಂದು ಸಲ ಅರ್ಧ ದಿನ ನಲ್ಲೀಲಿ ತೊಟ್ಟಿಕ್ಕೋ ನೀರನ್ನು ಡ್ರಮ್ಮುಗಟ್ಟಲೆ ಹ್ಯಾಗೆ ಸ್ಟಾಕ್ ಮಾಡಿಟ್ಟುಕೊಳ್ಳುವುದು?' ಮರು ಪ್ರಶ್ನೆ ಎಸೆದೆ.

'ಐಡಿಯಾ ನಾನು ಕೊಡ್ತೀನಿ. ಆದರೆ.. ಫೀಜು..!' ಜೋಕ್ ಮಾಡಿದವನಂತೆ ನಕ್ಕ.

'ಕೊಡೋಣ. ನಿನ್ನ ಐಡಿಯಾ ಸಕ್ಸಸ್ ಆದರೆ... ಅದೇನು ಬೇಗ ಬೊಗಳು' ಅಂದೆ.

ನನ್ನ ಕೈಯನ್ನು ಬಿಗಿಯಾಗಿ ಹಿಡಿದವನೆ ದರದರಾಂತ ಹಿತ್ತಲ ಕಡೆ ಎಳೆದುಕೊಂಡು ಹೋಗಿ ಸುತ್ತಲೂ ಕಣ್ಣು ಹಾಯಿಸಿ 'ಫೆಂಟಾಸ್ಟಿಕ್, ಲಕ್ಕು ಅಂದರೇ ನಿಂದೇ ಕಣಯ್ಯಾ'– ಎಂದವನೇ ನನ್ನ ಕೈಯನ್ನು ಮತ್ತಷ್ಟು ಬಿಗಿಯಾಗಿ ಹಿಡಿದು ದರದರನೆ ಬಚ್ಚಲು ಮನೆಗೆ ಎಳೆದುಕೊಂಡು ಹೋಗಿ ಮೇಲೆ ಕೆಳಗೆ ನೋಡಿ, ನನ್ನ ಕಡೆ ತಿರುಗಿ 'ನೋ ಪ್ರಾಬ್ಲಂ' ಅಂತ ನನ್ನ ಬೆನ್ನು ತಟ್ಟಿ ಮತ್ತೆ ಕೈಹಿಡಿದು ದರದರನೆ ಟರೇಸ್ ಮೇಲಕ್ಕೆ ಕರೆದುಕೊಂಡು ಹೋದ.

ಕೈನೋವು ತಾಳಲಾರದೆ ಅವನಿಂದ ಬಿಡಿಸಿಕೊಂಡು 'ಏನಯ್ಯಾ ಇದೆಲ್ಲಾ .. ವಾಸ್ತುಗೀಸ್ತು ದೋಷ ನೋಡ್ತಿದಿಯಾ' – ಎಂದು ಕೇಳಿದೆ.

'ಹೌದು, ವಾಸ್ತು ಪ್ರಕಾರ ನೀನು ಎಲ್ಲಾ ಕಡೆ ತೊಟ್ಟಿಗಳನ್ನು ಕಟ್ಟಿಸಬೇಕು' – ಸಲಹೆ ಕೊಟ್ಟ.

‘ಎಲ್ಲಾ ಕಡೆ ಅಂದ್ರೆ?’

‘ಹಿಂದೆ, ಮುಂದೆ, ಮೇಲೆ, ಕೆಳಗೆ – ಒಂದಿಂಚು ಜಾಗ ವೇಸ್ಟ್ ಮಾಡುವ ಹಾಗಿಲ್ಲ’

‘ಕೆಳಗೆ ಸಂಪಿದೆ ಕಣಯ್ಯಾ’ ಎಂದೆ.

‘ಅದರ ಪಾಡು ಅದರಲ್ಲಿ, ಅದರ ಮೇಲೇ ಒಂದು ತೊಟ್ಟಿ ಕಟ್ಟಿಸು’ ಎಂದ.

ನನಗೆ ತಲೆತಿರುಗುವಂತಾಯಿತು.

‘ಬಾರಯ್ಯಾ, ಬಿ.ಪಿ. ಮಾತ್ರೆ ನುಂಗುವಂತೆ. ಎಲ್ಲ ಸರಿಹೋಗುತ್ತೆ’ – ಸಾಂತ್ವನಗೊಳಿಸಿದ.

ಮನೆ ಕಟ್ಟಿಸಿ 6 ತಿಂಗಳಾಗಿಲ್ಲ. ಅಗ್ನಿ ಮೂಲೇಲಿ ಅಡಿಗೆಮನೆ, ನೈಋತ್ಯದಲ್ಲಿ ನೀರಿನ ಟ್ಯಾಂಕ್ ಅಂತ ವಾಸ್ತು ಪ್ರಕಾರ ಕಟ್ಟಿಸಿದ ಮನೆ ಸುತ್ತಾ ತೊಟ್ಟಿ ಕಟ್ಟಿಸಿದರೆ ಹೆಂಡತಿ ಅನ್ನೋ ಪ್ರಾಣಿ ಸುಮ್ಮನೆ ಇರ್ತಾಳಾ ಎಂದು ಗೊಣಗಿಕೊಂಡೆ.

‘ಯದ್ವಾತದ್ವಾ ವಾಸ್ತುಬಲ ಕೂಡಿ ಬಂದಿರುವುದರಿಂದಲೇ ಈಗ ಲಕ್ಕು ನಿನಗೆ ಕಿಕ್ಕು ಕೊಡ್ತಿದೆ’ – ಎಂದು ನನ್ನ ಭುಜಗಳಿಗೆ ಕೈಹಾಕಿ ಅಲುಗಾಡಿಸಿದ. ಮುಂದುವರೆದು ‘ನೀನೇನಾದರೂ ನನ್ನ ಮಾತಿಗೆ ಬೆಲೆ ಕೊಡದಿದ್ದರೆ ಮುಂದೊಂದು ದಿನ ಪರಿತಪಿಸಬೇಕಾದೀತು’ – ಎಚ್ಚರಿಸಿದ.

‘ಆಯ್ತು ಮಹರಾಯ, ಅಷ್ಟೊಂದು ತೊಟ್ಟಿಗಳನ್ನು ಏಕೆ ಕಟ್ಟಿಸಬೇಕು?’ – ಕೇಳಿದ.

‘ಹಾಗೆ ಬಾ ದಾರಿಗೆ, ಈಗ ವಿಷಯಕ್ಕೆ ಬರೋಣ’ – ವಿವರಿಸಲಾರಂಭಿಸಿದ.

‘ನೀರು.. ತಣ್ಣಿ ಈಗ ಚಿನ್ನ ಕಣಯ್ಯ, ತೊಟ್ಟೀ ಯಾಕೆ ಕಟ್ಟಿಸ್ತಾರೆ ಹೇಳು? ನೀರು ಸಂಗ್ರಹಿಸಿಟ್ಟುಕೊಳ್ಳೋದಕ್ಕೆ... ಯಾಕೆ ಸ್ಟಾಕ್ ಮಾಡಬೇಕು ಅಂದ್ರೆ – ವಾಟ್ರೋಲಾಗಿ ಪರಿವರ್ತಿಸಲಿಕ್ಕೆ’.

‘ವಾಟ್ರೋಲ್. ಅದು ಯಾವುದಯ್ಯಾ ಹೊಸ ಹೆಸರು!?’ ಆಶ್ಚರ್ಯದಿಂದ ಕೇಳಿದೆ.

‘ತಣ್ಣಿ ಬೇಕು ಅಂತ ತಮಿಳುನಾಡಿನ ಸಿಎಂ ಕರ್ನಾಟಕದ ಸಿಎಂನ ಯಾಕೆ ಪೀಡಿಸ್ತಿದೆ ಅಂದ್ರೆ ಆಯಮ್ಮ ಮತ್ತೆ ಗಾದಿ ಏರಿದ ಮೇಲೆ ಇರೋ ನೀರನ್ನೆಲ್ಲಾ ‘ವಾಟ್ರೋಲ್’ ಆಗಿ ಪರಿವರ್ತಿಸಿ ಅರವರು (ತಮಿಳಿಗರು) ಅರಬ್‌ರಂತೆ ವೈಭವದಿಂದ ಒಬ್ಬೊಬ್ಬರು ಹತ್ತುಹತ್ತು ಸಾವಿರ ಸೀರೆ, ಐದು ಐದು ಸಾವಿರ ಚಪ್ಪಲಿಗಳನ್ನು ತಂದಿಟ್ಟುಕೊಳ್ಳಬಹುದೆಂದು ಅವರ ಎಣಿಕೆ’ – ಎಂದ.

‘ಅಣ್ಣೀ ನೀ ಹೇಳಿದ್ದು ತಲೆಬುಡ ಅರ್ಥವಾಗ್ತಿಲ್ಲಪ್ಪ’ – ಅಂಗಲಾಚಿದೆ.

‘ಮಂಕೇ.. ತಮಿಳುನಾಡಿನ ರಮಣ ಪಿಳ್ಳೆ ಗಿಡಮೂಲಿಕೆಗಳ ಸಹಾಯದಿಂದ ನೀರಲ್ಲಿ ಸೇರಿಸಿ ಪೆಟ್ರೋಲ್ ತಯಾರಿಸಬಹುದೂಂತ ಪೇಟೆಂಟ್‌ಗೆ ಅರ್ಜಿ ಸಲ್ಲಿಸಿದ್ದಾನಂತೆ, ನೀರಿನಿಂದ ತಯಾರಾದ ಆ ದ್ರವಕ್ಕೆ ನಾನು ‘ವಾಟ್ರೋಲ್’ ಅಂತ ಹೆಸರು ಸೂಚಿಸುವುದರ ಜೊತೆಗೆ ಖಾಸಗಿಯಾಗಿ ನೀರು ಪೂರೈಸುತ್ತೇನೆ ಎಂದು ಅವನಿಗೆ ದೂರವಾಣಿ ಮುಖಾಂತರ ತಿಳಿಸಿದ್ದೇನೆ’ ಎಂದ.

‘ಅಂದ್ರೆ ಮುಂದೆ ಪೆಟ್ರೋಲ್‌ಗಿಂತ ನೀರಿನ ಬೆಲೆ ಹೆಚ್ಚಾಗಬಹುದು. ಕುಡಿಯುವ ನೀರಿಗೆ ಬರ ಬಂದು ಪೆಟ್ರೋಲ್ ಕುಡಿಯಬಹುದು’ – ಖುಷಿಯಾಗಿ ಅಂದೆ.

‘ಅದಕ್ಕೆ ಹೇಳಿದ್ದು ತೊಟ್ಟಿಗಳನ್ನು ಕಟ್ಟಿಸು ಅಂತ’ ಅಂದ. ಮುಂದುವರೆದು ಹೇಗಿದೆ ನನ್ನ ತೊಟ್ಟೀ ಐಡಿಯಾ? ಈ ಬಡಾವಣೆಯಲ್ಲಿ ನಿನ್ನ ಮನೆ ‘ತೊಟ್ಟೀಮನೆ’ ಅಂತಲೇ ಫೇಮಸ್ ಆಗಲಿ’ ಎಂದು ಸ್ವಾಮೀಜಿ ಆಶೀರ್ವದಿಸುವಂತೆ ಎರಡು ಕೈಗಳನ್ನು ಮೇಲೆತ್ತಿ ನನ್ನ ತಲೇ ಮೇಲಿಟ್ಟ. ಬಾಡಿಗೆ ಮನೆ ಆದ್ದರಿಂದ ಇಸ್ವನಿಗೆ ಆ ಛಾನ್ಸು ಸಿಕ್ಕಲಿಲ್ಲ.

ಅಷ್ಟರಲ್ಲಿ ಒಳಗಿನಿಂದ ಬುಲಾವ್ ‘ಹರಟೆ ಹೊಡೆದದ್ದು ಸಾಕು. ಬಾಯಿ ಮುಚ್ಚಿಕೊಂಡು ಬಚ್ಚಲು ಮನೆಯಲ್ಲಿರುವ ಎರಡು ಬಕೇಟ್‌ಗಳನ್ನು ತನ್ನಿ. ಹೊರಗಡೆ ನಲ್ಲೀಲಿ ತಣ್ಣಿ ತೊಟ್ಟಿಕ್ಕೋದಕ್ಕೆ ಶುರುವಾಯಿತು’.

ಇಸ್ವನಿಗೆ ವಿದಾಯ ಹೇಳಿ ಅವನ ತೊಟ್ಟೀ ಐಡಿಯಾ, ವಾಟ್ರೋಲ್ ವಿಷಯ ಹೆಂಡ್ತಿಗೆ ಹೇಳೋದೋ ಬೇಡವೋ? ನೀವೇ ಹೇಳಿ.

✷

---

## ಹೊಟ್ಟೆ ಪುರಾಣ

ಡಾಕ್ಟರ ಹತ್ತಿರ ಬಂದ ಮಹಿಳೆಯೊಬ್ಬಳು ಡಾಕ್ಟ್ರೆ ಯಾಕೋ ಮೂರು ದಿವಸದಿಂದ ಸರಿಯಾಗಿ ಊಟ ತಿಂಡಿ ಸೇರ್ತಾನೇ ಇಲ್ಲ ಅಂತ ಹೇಳಿದಳು. ಅದೊಂದು ಕಾಹಿಲೆಯೇ ಅಲ್ಲ. ಆದರೂ ಗಿರಾಕಿ ಅಂತ ಬಂದ ಮೇಲೆ ಏನಾದರೂ ಪರಿಶೀಲನೆ ನಡೆಸಿ ಪರಿಹಾರ ಹೇಳಲೇಬೇಕಲ್ಲ ಅಂದುಕೊಂಡ ಡಾಕ್ಟರು ಮೂರು ದಿವಸದಿಂದ ಏನು ತಿನ್ತಿದೀರ ಅಂತ ಕೇಳಿದರು. ಅದಕ್ಕೆ ಆ ಮಹಿಳೆ ನೋಡಿ ಡಾಕ್ಟ್ರೇ ತಿಂಡಿಗೆ ಅಂತ ಕೂತ್ರೆ ಒಂದು ಮೂರು ರೊಟ್ಟಿ ತಿನ್ನೋಷ್ಟ್ರಲ್ಲಿ ಸಾಕು ಅನಿಸಿಬಿಡುತ್ತೆ. ಹನ್ನೊಂದು ಗಂಟೆ ಹೊತ್ತಿಗೆ ಏನಾದರೂ ಕುರುಕೋಣ ಅಂತ ಕೂತರೆ ಒಂದ್ಹೈದಾರು ಚೆಕ್ಕುಲಿ ತಿನ್ನೋ ಹೊತ್ತಿಗೆ ವಾಕರಿಗೆ ಬರುತ್ತೆ. ಇನ್ನು ಊಟಕ್ಕೋ ಸ್ವಲ್ಪ ಚಟ್ನಿ ಪುಡಿ ಅನ್ನ, ಸ್ವಲ್ಪ ಹುಳಿ ಅನ್ನ, ಒಂದೆರಡು ಚಪಾತಿ, ಒಂದಿಷ್ಟು ಸಾರನ್ನ ತಿನ್ನೋ ಹೊತ್ತಿಗೆ ಸಾಕಪ್ಪಾ ಅನಿಸಿ ಮೊಸರನ್ನ ತಿನ್ನೋಕೆ ಆಗ್ತಿಲ್ಲ ಅಂತ ಇನ್ನೂ ಮಹಿಳೆ ಹೇಳ್ತನೇ ಇದ್ದಾಗ ಡಾಕ್ಟರು ತಲೆತಿರುಗಿ ಬಿದ್ದು ಅದೆಷ್ಟೋ ಹೊತ್ತಾಗಿತ್ತು.

# ಅಪರಂಜಿಗೆ ಹಾರ್ದಿಕ ಶುಭಾಷಯಗಳು

## ಡಾ. ಎಚ್.ಎಸ್. ಮುರಳಿ

ನೇತ್ರ ವೈದ್ಯರು

**ದಿ ಐ ಕ್ಲಿನಿಕ್**

ಅಣ್ಣಯ್ಯ ಕಾಂಪ್ಲೆಕ್ಸ್

ಹೊಸಳ್ಳಿ ರಸ್ತೆ, ಮಂಡ್ಯ

ಫೋನ್: 224834

ಸಮಯ: ಬೆಳಗ್ಗೆ 9 ರಿಂದ 1 ಗಂಟೆ

**ಮಾಲಸ ಐ ಕ್ಲಿನಿಕ್**

ಬಸ್ ಸ್ಟಾಂಡ್ ಸರ್ಕಲ್

ಚಾಮುಂಡೀಪುರಂ

ಮೈಸೂರು 570 004

ಫೋನ್: 2332225

ಸಮಯ: ಸಂಜೆ 5 ರಿಂದ 8 ಗಂಟೆ

ಮೊಬೈಲ್: 94487 40093



# ಕರದಿಂಗಳ ಕುಬಸ...

**- ಪ್ರಶಾಂತ ಅಡೂರ**

ಇದ ಒಂದ ನಾಲ್ಕ ತಿಂಗಳದ ಹಿಂದಿನ ಮಾತ ಇರಬೇಕ, ನಮ್ಮ ತಂಗಿ ಅತ್ತಿ ಮನ್ಯಾಗಿನ ಸೀಮಂತ ಮುಗಿಸಿಕೊಂಡ ಹಡಿಲಿಕ್ಕೆ ಅಂತ ಗಂಡನ ಮನ್ಯಾಗಿಂದ ಗುಡಚಾಪಿ ಕಿತಗೊಂಡ ನಮ್ಮ ಮನಿಗೆ ಬಂದ ಟೆಂಟ್ ಹಾಕಿದ್ಲು. ಹಂಗ ಅಕಿವು ಲಗ ಭಗ ಎಷ್ಟ ನಮೂನಿ ಸೀಮಂತ ಜಗತ್ತಿವಾಗ ಅವ ಅವನ್ನೇಲ್ಲಾ ನಮ್ಮವ್ವ ಮೊದ್ಲ ಮುಗಸಿದಿದ್ಲು. ಆದರು ನಮ್ಮ ತಂಗಿ ಯಾವದರ ಹೊಸಾ ಹೊಸಾ ಸೀಮಂತ ಇನ್ನು ಉಳದಾವೇನ ಅಂತ ಹುಡಕಿ ಹುಡಕಿ ಮಾಡಿಸ್ಗೋತ ಹೊಂಟಿದ್ಲು. ನಂಗಂತೂ ಖರೇನ ಹೇಳ್ತೇನಿ ಎಲ್ಲೆ ಅಕಿ ಯಾರರ ಇನ್ನೊಂದ ಎರಡ ಹೊಸಾ ನಮೂನಿ ಸೀಮಂತ ಹೇಳಿದರ ಹಡಿಯೋದನ್ನ ಸಹಿತ ಒಂದ ಎರಡ ತಿಂಗಳ ಪೋಸ್ಟಪೋನ್ ಮಾಡ್ತೋಳೊ ಅಂತ ಚಿಂತಿ ಹತ್ತಿ ಬಿಟ್ಟಿತ. ನನಗ ನನ್ನ ಹೆಂಡತಿಗರ ಯಾವಾಗ ಇಕಿದೋಂದ ಬಾಣಂತನ ಮಾಡೆ ಅಟ್ಗ್ಯೋವೊ ಅಂತ ಅನಿಸಿದರ ಇಕಿ ನೋಡಿದರ ಹಡೇಯೊದರ ಬಗ್ಗೆ ಚಕಾರ ಎತ್ತಲಾರದ ಇನ್ನೂ ಆ ಸೀಮಂತ ಈ ಸೀಮಂತ ಅಂತ ನಮ್ಮ ಜೀವಾ ತಿನ್ನಲಿಕತ್ತಿದ್ಲು. ಅದರಾಗ ಆ ಡಾಕ್ಟರ ಬ್ಯಾರೆ ಇಕಿ ತೋರಸಲಿಕ್ಕೆ ಹೋದಾಗೊಮ್ಮೆ ವಾರಗಟ್ಟಲೇ ಡಿಲೇವರಿ ಡೇಟ್ ಮುಂದ ಹಾಕ್ಕೋತ ಹೊಂಟ ಬಿಟ್ಟಿದ್ದಾ, ಇಕಿಗೂ ಅದ ಬೇಕಾಗಿತ್ತ. ಹೆಂಗಿದ್ದರೂ ಹಡಿಯೋದ ಇನ್ನೂ ದೂರ ಅದ ತಡಿ ಅಂತ ಸೀಮಂತ ಮಾಡಿಸ್ಗೋತ ಕೂತ ಬಿಟ್ಟಿದ್ಲು.

> **ಅಲ್ಲಾ ಈ ಹೆಣ್ಣಮಕ್ಕಳ ತಮ್ಮ ಅನಕೂಲಕ್ಕ ಏನೇನ ಕಂಡಹಿಡಿತಾರೊ ಏನೋ ಅಂತೇನಿ....**

ಅದರಾಗ ನಮ್ಮವ್ವನೂ ಹುರುಪಿನೋಕಿ, ಮ್ಯಾಲೆ ಮಗಳದ ಒಂದನೇ ಬಾಣಂತನಾ ಹಿಂಗಾಗಿ ಅಕಿ ಹೇಳಿದ್ದ ಸೀಮಂತ ಮಾಡ್ಕೋತ ಹೊಂಟ ಬಿಟ್ಟಿದ್ಲು. ಇನ್ನೊಂದ ವಿಚಿತ್ರ ಅಂದರ ನಮ್ಮ ತಂಗಿಗೆ ಅವರ ವೈನಿ ಮಾಡಿಸ್ಗೊಂಡದ್ದಕಿಂತಾ ಒಂದ ಜಾಸ್ತಿ ಸೀಮಂತ ಮಾಡಿಸ್ಗೋಬೇಕು ಅಂತ ತಲ್ಯಾಗ ಹ್ಯಾಂವ ಹಿಕ್ಕ ಬಿಟ್ಟಿತ್ತ. ಹಿಂಗಾಗಿ 'ಭಾಭಿ ನೀ ಯಾವ್ಯಾವ ಸೀಮಂತ ಮಾಡಿಸ್ಗೊಂಡಿದ್ದಿ?' ಅಂತ ಕೇಳಿ ಕೇಳಿ ತಾನು ಮಾಡಿಸ್ಗೋಳಿಕತ್ತಿದ್ಲು. ಅಲ್ಲಾ ಅವರ ವೈನಿ ಅಂದರ ನನ್ನ ಹೆಂಡತಿನ ಆ ಮಾತ ಬ್ಯಾರೆ. ಆದರ ನನ್ನ ಹೆಂಡತಿ ಸೀಮಂತ ಮಾಡಿಸ್ಗೊಂಡಿದ್ದ ಅಕಿ ತವರಮನಿ ಖರ್ಚ್ ಒಳಗ ಆದರ ನಮ್ಮ ತಂಗಿ ಮಾಡಿಸ್ಗೋಳೊದ ತನ್ನ ತವರಮನಿ ಖರ್ಚ್ ಒಳಗ ಅಂದರ ನನ್ನ ಖರ್ಚಿನಾಗ. ನಂಗ ಹಿಂಗ ಇಕಿದ ಡಿಲೇವರಿ ಡೇಟ್ ಮುಂದ ಹೊಕ್ಕೋತ ಹೊಂಟರ ಮುಂದ ಅಕಿದ ನಾರ್ಮಲರ್ ಆಗಲಿ ಇಲ್ಲಾ ಸಿಜರಿನರ್ ಆಗಲಿ ನಂದಂತೂ ಅಕಿದ ಬಾಣಂತನ ಮಾಡಿ ಅಟ್ಗೋದರಾಗ ಸಿಜರಿನ್ ಆಗೋದ ಗ್ಯಾರಂಟಿ ಅಂತ ಅನಸಲಿಕತ್ತ್.

ಕಡಿಕೆ ನನ್ನ ಪುಣ್ಯಾಕ್ಕ ಒಂದ ಸರತೆ ಡಾಕ್ಟರ ಕಡೆ ತೋರಸಲಿಕ್ಕೆ ಹೋದಾಗ ಅವರ 'ನಿಂಬದು ಡೇಟ್ ಬಾರ್ ಆಗೇದ ಹಂಗ ನಾರ್ಮಲ್ ಆಗಲಿ ಅಂತ ವೇಟ್ ಮಾಡ್ಕೋತ ಕೂತರ ನಡೆಯಂಗೇಲಾ ಸುಮ್ನ ಮೂಹೂರ್ತಾ ನೋಡಿ ಸಿಜರಿನ್ ಮಾಡಿಸ್ಗೊಂಡ ಬಿಡ್ತೀರೇನ್ ನೋಡ್ರಿ' ಅಂತ ಮತ್ತ ಇಕಿಗೆ ಆಪ್ಶನ್ ಕೊಟ್ಟರು. ಇಕಿ ವಿಚಾರ ಮಾಡಿ ಮುಂದಿನ ವಾರ ಹೇಳ್ತೇನಿ ಅಂತ ಮತ್ತ ವಾಪಸ ಮನಿಗೆ ಬಂದ್ಲು. 'ಅಲ್ಲಾ ಅದರಾಗ ವಿಚಾರ ಮಾಡೋದ ಏನ ಡೇಟ್ ಫಿಕ್ಸ್ ಮಾಡ್ಕೊಂಡ ಬರಬೇಕಿಲ್ಲ' ಅಂತ ನಾ ಅಂದರ 'ನಿಂಗೇಲ್ಲಾ ಗೊತ್ತಾಗಂಗಿಲ್ಲಾ ತೊಗೊ, ಮುಂದಿನವಾರ ಮಾಮಿ ಸೀಮಂತ ಇಟಗೊಂಡಾರ ಅದನ್ನ ಮುಗಿಸಿಗೊಂಡ ಡೇಟ್ ಫಿಕ್ಸ್ ಮಾಡ್ಕೊಂಡರ ಆತು' ಅಂತ ನಂಗ ಜೋರ ಮಾಡಿದ್ಲು.

ಏನ್ಮಾಡ್ತೀರಿ ಹಿಂತಾಕಿಗೆ, ಡಾಕ್ಟರ್ 'ನೀ ದಿಂದಾಗ ಇದ್ದಿ, ಎನಿ ಮುಮೆಂಟ್ ಡಿಲೇವರಿ ಆಗಬಹುದು ಪಟಕ್ಕನ್ ಡಿಲೇವರಿ ಮಾಡಿಸ್ಗೊಂಡ ಬಿಡ' ಅಂದರು ಇಕಿ ಆ ಸೀಮಂತದ ಸಂಬಂಧ ಡೇಟ್ ಫೈನಲೈಜ್ ಮಾಡವಳ್ಳಾಗಿದ್ಲು. ಅಲ್ಲಾ ಹಂಗ ನಮ್ಮ ಮಾಮಿ ಇಕಿದ ಕುಬಸಾ ಮೊದ್ಲ ಮಾಡಿದ್ಲು ಈಗ ಮತ್ತೇನ ಇಕಿ ಹಡಿವಳ್ಳಂತ ಎರಡನೇ ರೌಂಡ ಸೀಮಂತ ಮಾಡಲಿಕತ್ತ್ಲೇನ್ ಅಂತ ಕೇಳಿದರ 'ಏ, ಅದೇನೋ ಕರದಿಂಗಳ ಸೀಮಂತ ನಿಮ್ಮ ತಂಗಿ ಗಂಟ ಬಿದ್ದಾಳ ಅದನ್ನೊಂದ ಮಾಡಿಸ್ಗೊಂಡ ಹಡೇಯೋಕಿ ಅಂತ' ಅಂತ ನನ್ನ ಹೆಂಡತಿ ಕೆಟ್ಟ ಮಾರಿ ಮಾಡ್ಕೊಂಡ ಅಂದ್ಲು. 'ಕರದಿಂಗಳ ಸೀಮಂತ' ಅಂತ ಕೇಳಿ ನಾ ಒಮ್ಮಿಕ್ಕಲೇ ಗಾಬರಿ ಆದೆ, ಅಲ್ಲಾ ಹಂಗ ಬೆಳದಿಂಗಳ ಸೀಮಂತ ಅಂತ ಕೇಳಿದ್ದೆ ಆದರ ಈ ಕರದಿಂಗಳ ಸೀಮಂತ ಎಲ್ಲಿಂದ ಬಂತಲೇ ಅಂತ ನನ್ನ ಹೆಂಡತಿಗೆ ಕೇಳಿದರ 'ಎಲ್ಲಿಂದ ಬಂತೊ ಏನೊ ಯಾರಿಗೊತ್ತರಿ, ಬೆಳದಿಂಗಳದಾಗ ಮಾಡಿದರ ಬೆಳದಿಂಗಳ ಸೀಮಂತ ಅಂತಾರ, ಈಗ ಅಮವಾಸಿ ಹತ್ತರ ಬಂದದ ಹಿಂಗಾಗಿ ನಿಮ್ಮ ತಂಗಿ ಅಮವಾಸಿ ಕರಿ ಕತ್ತಲಿ ಒಳಗ ಕರದಿಂಗಳ ಸೀಮಂತ ಮಾಡಿಸ್ಗೋಳೊಕಿ' ಅಂತ ಹೇಳಿದ್ಲು.

ಅಲ್ಲಾ ಈ ಹೆಣ್ಣಮಕ್ಕಳ ತಮ್ಮ ಅನಕೂಲಕ್ಕ ಏನೇನ ಕಂಡಹಿಡಿತಾರೊ ಏನೋ ಅಂತೇನಿ. ಅನ್ನಂಗ ನನ್ನ ಹೆಂಡತಿಗೆ ಯಾಕ ಈ ಕರದಿಂಗಳ ಸೀಮಂತ ಅಂದಕೂಡಲೇ ಸಿಟ್ಟ ಬಂದಿತ್ತ ಅಂದರ ಪಾಪ ಅವರವ್ವ ಅಕಿಗೆ ಈ ಸೀಮಂತ ಮಾಡಿದ್ದಿಲ್ಲಾ, ಹಿಂಗಾಗಿ ನಮ್ಮ ತಂಗಿ ನನ್ನ ಹೆಂಡತಿಕಿಂತ ಒಂದ ಹೆಚಗಿ ಸೀಮಂತ ಮಾಡಿಸ್ಗೊಂಡ್ಲಲಾ ಇಕಿಗೆ ಸಂಕಟ ಆಗಲಿಕತ್ತಿತ್ತ ಇಷ್ಟ. ಕಡಿಕೆ ಒಂದ ದಿವಸ ರಾತ್ರಿ ಕರದಿಂಗಳ ಸೀಮಂತ ಮಾಡಿಸ್ಗೊಂಡ ಕರಿ ಅಂಚ ಇದ್ದದ್ದ ಮತ್ತೊಂದ ಸೀರಿ ಉಡಿ ತುಂಬಿಸ್ಗೊಂಡ ಮರುದಿವಸ ದಾವಾಖನಿಗೆ ಹೋಗಿ ಅಡ್ಮಿಟ್ ಆಗಿ ಅದರ ಮರುದಿವಸ ಹಡದ್ಲು. ಖರೇ ಹೇಳ್ತೇನಿ ಹಡದೊಕೇನೊ ಅಕಿ ಆದರ ಮೈ ಮನಸ್ಸು ಹಗರ ಆಗಿದ್ದ ಮಾತ್ರ ನಂದ, ಅಷ್ಟ ಆ ಸೀಮಂತ ಸಂಬಂಧ ನಂಗ ಸಾಕ ಸಾಕಾಗಿ ಹೋಗಿತ್ತ.

ಅಲ್ಲಾ ಹಂಗ ಈಗ ಹಡದ ಮ್ಯಾಲೆ ಬಾಣಂತನದ ಹಣಗಲ ಶುರು ಆಗೇದ ಆ ಮಾತ ಬ್ಯಾರೆ, ಅದನ್ನ ಮತ್ತ ಯಾವಾಗರ ಹೇಳ್ತೇನಿ. ಆದರು ಒಂದ ಸರತೆ ಅಕಿ ಮಾಡಿಸ್ಗೊಂಡ ಸೀಮಂತ ಲಿಸ್ಟ್ ಹೇಳ್ತೇನಿ ಓದಿ ಬಿಡ್ರಿ, ಹಂಗ ನಿಮಗ್ಯಾರಿಗರ ಉಪಯೋಗ ಆದರು ಆಗಬಹುದು. ಅಂದ ಹಾಗಿ ನಮಕಡಿ ಈ ಸೀಮಂತಕ್ಕೆ ಕುಬುಸಾ ಅಂತ ಕರೀತಾರ. ಹಾಗಾಗಿ..

ಮೊದ್ಲ ಶುರು ಆಗೋದ ಕಳ್ಳ ಕುಬಸ, ತವರ ಮನಿ ಕುಬಸ, ಸಾರ್ವಜನಿಕ ಕುಬಸ, ಹೋಟೆಲ್ ಕುಬಸ, ತೋಟದ ಕುಬಸಾ, ತೂಗಮಂಚ ಕುಬಸ, ಬೆಳದಿಂಗಳ ಕುಬಸ, ಮಾಲ್ ಕುಬಸ, ಎಳೆ ಬಿಸಿಲ ಕುಬಸ, ದೀಪದ ಕುಬಸ, ಪಿಜ್ಜಾ ಕುಬಸಾ, ಪಾವ್ ಭಾಜಿ ಕುಬಸಾ, ಕರದಿಂಗಳ ಕುಬಸ... ಅಯ್ಯಯ್ಯ... ಒಂದ ಎರಡ ಹಂಗ ಎಷ್ಟ ಬರದರು ಕಡಮಿನ ಬಿಡ್ರಿ, ಅಕಿ ಏನರ ಇನ್ನೊಂದ ಎರಡ ದಿವಸದಾಗ ಹಡದಿದ್ದಿಲ್ಲಾ ಅಂದರ ನಾ ಒಂದ ಲಗೂ ಹಡಿ ಕುಬಸಾ ಅಂತ ಹೊಸಾ ನಮೂನಿ ಕುಬಸಾ ಮಾಡಿ ದಾವಾಖಾನಿಗೆ ಹೋಗಿ ಅಡ್ಮಿಟ್ ಮಾಡಿ ಬರೋಂವ ಇದ್ದೆ ಏನೋ ಪುಣ್ಯಾ ಅಷ್ಟರಾಗ ಹಡದ್ಲು, ಅನ್ನಂಗ ಇನ್ನೊಂದ ಹೇಳೋದ ಮರತೆ ನನ್ನ ಹೆಂಡತಿಗೆ ನನ್ನ ತಂಗಿಗೆ ಕರದಿಂಗಳ ಕುಬಸಾ ಮಾಡ್ತಾರ ಅಂದಾಗ ಬೇಜಾರ ಆಗಿತ್ತಲಾ ಅದಕ್ಕ ನಮ್ಮವ್ವ ಏನ ಅಂದ್ಲ ಗೊತ್ತ ಅಯ್ಯ... ಬೆಳ್ಳಗ ಇದ್ದೋರಿಗೆ ಇಷ್ಟ ಕರದಿಂಗಳಾ ಕುಬಸಾ ಮಾಡ್ತಾರ ಪ್ರೇರಣಾ ಹಿಂಗಾಗಿ ನಿಂಗ ಮಾಡಿದ್ದಿಲ್ಲ ತೊಗೊ ಯಾಕ ಬೇಜಾರ ಆಗ್ತಿ ಅಂದ್ಲು, ಏನ ಮಾಡ್ತಿರಿ ನಮ್ಮವ್ವನ ಹಂತಾವರಿಗೆ? ಪಾಪ ನನ್ನ ಹೆಂಡ್ತಿ ಎರೆಡ ಹಡದೋಕಿಗೆ ತನ್ನ ಮಗಳ ಒಂದನೇದ ಹಡಿಲಿಕತ್ಲು ಅಂತ ಹೆಂಗ ಬೇಕಾದಂಗ ಅನ್ನೋದ? ಇದಕ್ಕ ಅನ್ನೋದ ಹೆಣ್ಣ ತಾಯಿ ಕರಳ ಅಂತ, ಮಗಳ ಮಕ್ಕಳಿಗೆ ಒಂದು ಮಗನ ಮಕ್ಕಳಿಗೆ ಒಂದು ಮಾಡೊದಕ್ಕ.

ಇರಲಿ ನಮ್ಮ ತಂಗಿ ಇಷ್ಟ ಕುಬಸಾ ಮಾಡಿಸ್ಗೊಂಡರು ಈಗ ಮುತ್ತಿನಂತಾ ಒಂದ ಗಂಡಸ ಮಗನ ಹಡದಾಳ, ಇರೋಕಿ ಒಬ್ಬೊಕಿ ತಂಗಿ ನಾನರ ಅಕಿಗೆ ಮಾಡಲಾರದ ಇನ್ನ್ಯಾರಿಗ ಮಾಡ್ಬೇಕ ಬಿಡ್ರಿ. ಹಂಗ ಹೆಂಡ್ತಿ ಮಾತ ಕೇಳಿ ತಂಗಿ ತವರಮನಿ ಒಳಗ ಕುಬಸಾ ಮಾಡಿಸ್ಗೊಂಡದ್ದರ ಲೆಕ್ಕಾ ಇಡೋದ ತಪ್ಪ ಅನ್ರಿ.

✳

## ಪದಬಂಧದ ಉತ್ತರ

**ಎಡದಿಂದ ಬಲಕ್ಕೆ**

1. ಸರಸ 3. ವರಮಾನ 5. ನಯನ 7. ನಮಸ್ಕಾರ 9. ನೀರಾ 10. ಋಹ 11. ಜಯಶಾಲಿ 14. ಹರಿತ 16. ಗಡಿಯಾರ 17. ನಸ್ರಾಣಿ

**ಮೇಲಿಂದ ಕೆಳಕ್ಕೆ**

1. ಸನ್ಮಾನ 2. ಸದನ 3. ವನಸುಮ 4. ಒಲುಮೆ 6. ಯಮರಾಜ 7. ನಕಲಿ 8. ರಣಭೇರಿ 12. ಶಾಕಹಾರ 13. ವಿರಾಗ 14. ಹವನ 15. ತರುಣಿ